# ಕೆಲಸದ ಕಡೆಗೆ ಸತ್ಯವೇದದ ಮನೋಭಾವ



ಅಶೀಷ್ ರಾಯಚೂರ್

**ಉಚಿತವಾದ ಹಂಚಿಕೆಗಾಗಿ ಮಾತ್ರ**
ಮುದ್ರಣ ಮತ್ತು ಹಂಚಿಕೆ: ಆಲ್ ಪೀಪಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್ ರೀಚ್, ಬೆಂಗಳೂರು
ಪ್ರಸ್ತುತ ಪ್ರತಿ: 2024

**ಸಂಪರ್ಕ ಮಾಹಿತಿ**
All Peoples Church & World Outreach,
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

ದೂರವಾಣಿ: + 91-80-25452617
ಇಮೇಲ್: **bookrequest@apcwo.org**
ವೆಬ್ಸೈಟ್: **apcwo.org**

ಬೇರೆ ರೀತಿಯಲ್ಲಿ ಸೂಚಿಸಿದ ಹೊರತು, ಎಲ್ಲಾ ಧರ್ಮಗ್ರಂಥದ ಉಲ್ಲೇಖಗಳನ್ನು ಕನ್ನಡ ಸತ್ಯವೇದವು - ಜೆ.ವಿ - ಬಿ ಎಸ್ ಐ, ಆವೃತ್ತಿಯಿಂದ ತೆಗೆದುಕ್ಕೊಳ್ಳಲಾಗಿದೆ. ಬೈಬಲ್ ಸೊಸೈಟಿ ಆಫ್ ಇಂಡಿಯಾದ(BSI) ಅನುಮತಿಯಿಂದ ಬಳಸಲಾಗಿದೆ.

**ಉಚಿತ ವಿತರಣೆಗಾಗಿ**
ಈ ಪುಸ್ತಕದ ಉಚಿತ ವಿವರಣೆಯು ಆಲ್ ಪೀಪಲ್ಸ್ ಸಭೆಯ ಸಭಿಕರು, ಪಾಲುಗಾರರ ಹಣಕಾಸಿನ ನೆರವಿನ ಮೂಲಕ ಸಾಧ್ಯವಾಗಿದೆ. ಇಂತಹ ಉಚಿತ ಪುಸ್ತಕ ಪ್ರಕಾಶನದ ಮೂಲಕ ನೀವು ಸಮೃದ್ಧಿ ಹೊಂದಿದ್ದರೆ ಆಲ್ ಪೀಪಲ್ಸ್ ಸಭೆಯ ಪ್ರಕಾಶನಗಳ ಉಚಿತ ವಿತರಣೆ ಮತ್ತು ಮುದ್ರಣಗಳಿಗೆ ಹಣಕಾಸಿನ ಸಹಾಯ ನೀಡುವಂತೆ ನಿಮ್ಮನ್ನು ಆಹ್ವಾನಿಸುತ್ತೇವೆ. ಆಲ್ ಪೀಪಲ್ಸ್ ಸಭೆಯೊಟ್ಟಿಗೆ ಪಾಲುದಾರರಾಗಲೂ **apcwo.org/give** ಅಥವಾ ಈ ಪುಸ್ತಕದ ಹಿಂಭಾಗದ ಪುಟಗಳಲ್ಲಿರುವ ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ ಎಂಬ ಪುಟವನ್ನು ಹೇಗೆ ಸಹಾಯ ಮಾಡಬಹುದೆಂಬುದನ್ನು ನೋಡಿರಿ. ವಂದನೆಗಳು!

**ಉಚಿತ ಸಂಪನ್ಮೂಲಗಳು ಮತ್ತು ಸಂಬಂಧಿತ ವೆಬ್‌ಸೈಟ್‌ಗಳು**
**ಪ್ರಸಂಗಗಳು:** apcwo.org/sermons | **ಪುಸ್ತಕಗಳು:** apcwo.org/books
**ಚರ್ಚ್ ಆಪ್:** apcwo.org/app | **ಸತ್ಯವೇದ ಕಾಲೇಜು:** apcbiblecollege.org
**ಇ-ಕಲಿಕೆ:** apcbiblecollege.org/elearn | **ಸಲಹಾ ಸೇವೆ:** chrysalislife.org
**ಸಂಗೀತ:** apcmusic.org | **ಸೇವಕರುಗಳ ಅನ್ಯೋನ್ಯತೆ:** pamfi.org
**ಏಪಿಸಿ ಪ್ರಪಂಚ ಸೇವೆಗಳು:** apcworldmissions.org

(Kannada—Biblical Attitude Towards Work)

# ಕೆಲಸದ ಕಡೆಗೆ ಸತ್ಯವೇದದ ಮನೋಭಾವ

# ಪರಿವಿಡಿ


1. ಕೆಲಸವು ದೇವರ ಯೋಜನೆಯಾಗಿದೆ 1
2. ಕೆಲಸದ ಕುರಿತು ತಪ್ಪಾದ ಮನೋಭಾವಗಳು 3
3. ಕೆಲಸದ ಬಗ್ಗೆ ಒಬ್ಬ ವಿಶ್ವಾಸಿಯ ದೃಷ್ಟಿಕೋನ 7
4. ವಿಶ್ವಾಸಿಗಳು ಕೆಲಸ ಮಾಡಲು ಆಜ್ಞಾಪಿಸಲ್ಪಟ್ಟಿದ್ದಾರೆ 12
5. ಏಳು ಸರಿಯಾದ ಮನೋಭಾವಗಳು 21
6. ನಿಮ್ಮ ಕೆಲಸ ಕುರಿತಾದ ವಾಗ್ದಾನಗಳು 26
7. ಹೊಸ ಜಗತ್ತಿನಲ್ಲಿ ಕೆಲಸ ಮಾಡುವುದು 29

# 1

# ಕೆಲಸವು ದೇವರ ಯೋಜನೆಯಾಗಿದೆ

**ಆದಿಕಾಂಡ 1:31**

**ದೇವರು ತಾನು ಉಂಟುಮಾಡಿದ್ದನ್ನೆಲ್ಲಾ ನೋಡಲಾಗಿ ಅದು ಬಹು ಒಳ್ಳೇದಾಗಿತ್ತು. ಸಾಯಂಕಾಲವೂ ಪ್ರಾತಃಕಾಲವೂ ಆಗಿ ಆರನೆಯ ದಿನವಾಯಿತು.**

**ಆದಿಕಾಂಡ 2:1-3**

**[1] ಹೀಗೆ ಭೂಮ್ಯಾಕಾಶಗಳೂ ಅವುಗಳಲ್ಲಿರುವ ಸಮಸ್ತವೂ ನಿರ್ಮಿತವಾದವು.**

**[2] ದೇವರು ತನ್ನ ಸೃಷ್ಟಿಕಾರ್ಯವನ್ನು ಮುಗಿಸಿಬಿಟ್ಟು ಏಳನೆಯ ದಿನದಲ್ಲಿ ವಿಶ್ರಮಿಸಿಕೊಂಡನು.**

**[3] ದೇವರು ತನ್ನ ಸೃಷ್ಟಿಕಾರ್ಯವನ್ನು ಮುಗಿಸಿ ಆ ಏಳನೆಯ ದಿನದಲ್ಲಿ ವಿಶ್ರಮಿಸಿಕೊಂಡದ್ದರಿಂದ ಆ ದಿನವನ್ನು ಪರಿಶುದ್ಧ ದಿನವಾಗಿರಲಿ ಎಂದು ಆಶೀರ್ವದಿಸಿದನು.**

ದೇವರು ಇಲ್ಲಿ ಕೆಲಸ ಮಾಡುವದನ್ನು ನಾವು ನೋಡುತ್ತೇವೆ. ಆತನು ಆರು ದಿನ ಕೆಲಸ ಮಾಡಿದನು ಮತ್ತು ಏಳನೇ ದಿನದಲ್ಲಿ ವಿಶ್ರಾಂತಿ ತೆಗೆದುಕೊಂಡನು, ಆದರೆ ನಮ್ಮ ಹಾಗೆ, ಆಯಾಸದಿಂದ ದೇವರು ವಿಶ್ರಾಂತಿ ತೆಗೆದುಕೊಳ್ಳಲಿಲ್ಲ. ಸೃಷ್ಟಿಯ ಕೆಲಸವನ್ನು ಪೂರ್ಣಗೊಳಿಸಿ—ಆತನು ಮಾಡಬೇಕಾದದ್ದನ್ನು ಮಾಡಿ ಮುಗಿಸಿದನು. ಆತನು ಉಂಟು ಮಾಡಿದ್ದೆಲ್ಲವು ಒಳ್ಳೆಯದು ಮತ್ತು ಸಂಪೂರ್ಣವಾದದ್ದು ಎಂದು ಆತನು ಕಂಡನು. ಆದದರಿಂದ, ಆತನು ಸ್ವಲ್ಪ ಕಾಲ ವಿಶ್ರಮಿಸಿಕೊಂಡನು.

ಆದರೆ, ಆದಾಮನು ಪಾಪದಲ್ಲಿ ಬಿದ್ದ ಕ್ಷಣವೇ, ದೇವರು ಮಾತ್ತೊಮ್ಮೆ ಕಾರ್ಯಮಾಡಲು ಪ್ರಾರಂಭಿಸಿದನು. ಹೇಗಿದ್ದರೂ, ಈ ಸಲ ಅದು ಮನುಷ್ಯನನ್ನು ತನ್ನ ಕಡೆಗೆ ತರುವ—ವಿಮೋಚನೆಯ ಕೆಲಸವಾಗಿತ್ತು. ಆ ಸಮಯ ಮೊದಲುಗೊಂಡು, ದೇವರು ಮಾನವ ಕುಲಕ್ಕೆ ತನ್ನ ರಕ್ಷಣಾ ಯೋಜನೆಯನ್ನು ಪ್ರಕಟಿಸುತ್ತಾ ಎಡಬಿಡದೆ ಕೆಲಸ ಮಾಡುತ್ತಿದ್ದಾನೆ. ದೇವರು ಕೆಲಸ ಮಾಡುತ್ತಾನೆ!

**ಆದಿಕಾಂಡ 2:15**

**ಯೆಹೋವ ದೇವರು ಆ ಮನುಷ್ಯನನ್ನು ಕರಕೊಂಡು ಹೋಗಿ ಏದೆನ್ ತೋಟವನ್ನು ವ್ಯವಸಾಯ ಮಾಡುವದಕ್ಕೂ ಕಾಯುವದಕ್ಕೂ ಅದರಲ್ಲಿ ಇಟ್ಟನು.**

ದೇವರು ಆದಾಮನನ್ನು ಏದೆನ್ ತೋಟದಲ್ಲಿ ಹಾಕಿ ಅವನಿಗೆ– "ಆದಾಮನೇ, ನೀನು ಕೇವಲ ನನ್ನನ್ನು ಆರಾಧಿಸುತ್ತಿರಬೇಕಷ್ಟೆ" ಎಂದು ಹೇಳಲಿಲ್ಲ. ಬೀಳುವದಕ್ಕೆ ಮುಂಚೆಯೇ ದೇವರು ಆದಾಮನಿಗೆ ಒಂದು ಕೆಲಸ ಕೊಟ್ಟಿದ್ದನು. ಆದಾಮನ ಕೆಲಸ *"ಭೂಮಿಯನ್ನು ವ್ಯವಸಾಯ ಮಾಡುವದು"* (ಆದಿಕಾಂಡ 2:15) ಮತ್ತು ಏದೆನ್ ತೋಟವನ್ನು ಕ್ರಮವಾಗಿ ಇಡುವದಾಗಿತ್ತು.

ಇದು ಅವನ ಕೆಲಸವಾಗಿತ್ತು, ಅವನ ವೃತ್ತಿಯಾಗಿತ್ತು! ಬೀಳುವಿಕೆಗೆ ಮುಂಚೆಯೇ ಕೆಲಸದ ಪರಿಕಲ್ಪನೆಯನ್ನು ದೇವರು ಪರಿಚಯಿಸಿದ್ದನು.

ಬೀಳುವಿಕೆಯ ನಂತರ, ಆದಾಮನು ಎಡಬಿಡದೆ ವ್ಯವಸಾಯದ ಕೆಲಸ ಮಾಡಬೇಕಾಗಿತ್ತು, ಅಷ್ಟೇ ಅಲ್ಲದೆ ಈಗ, ಭೂಮಿಯು ಶಾಪಗ್ರಸ್ತವಾಗಿತ್ತು ಮತ್ತು ಆದಾಮನು ಅದರಲ್ಲಿ ಬೆಳೆಯನ್ನು ತೆಗೆಯಲು ಮತ್ತಷ್ಟು ಕಷ್ಟಪಡಬೇಕಾಗಿತ್ತು (ಆದಿಕಾಂಡ 3:17-19). ನಾವೆಲ್ಲರೂ ಮದುವೆಯು ದೇವರ ಯೋಜನೆಯಾಗಿದೆ ಎಂದು ನಂಬುತ್ತೇವೆ, ಆದದರಿಂದ ಮದುವೆಯನ್ನು ನಾವು ಆನಂದಿಸುತ್ತೇವೆ. ಸಭೆಯು ದೇವರ ಯೋಜನೆಯಾಗಿದೆ ಎಂದು ನಾವು ನಂಬುತ್ತೇವೆ, ಆದದರಿಂದ ನಾವು ಸಭೆಯನ್ನು ಆನಂದಿಸುತ್ತೇವೆ. ಶುಭ ಸಮಾಚಾರವೆಂದರೆ ಕೆಲಸವು ಸಹ ದೇವರ ಯೋಜನೆಯಾಗಿದೆ, ದೇವರು ಅದನ್ನು ಸ್ಥಾಪಿಸಿದ್ದಾನೆ! ಆದದರಿಂದ, ನಾವು ಕೆಲಸವನ್ನು ಆನಂದಿಸೋಣ!

# 2
# ಕೆಲಸದ ಕುರಿತು ತಪ್ಪಾದ ಮನೋಭಾವಗಳು

## ಕೆಲಸವು ಒಂದು ಅಡಚಣೆಯಾಗಿದೆ

ನಮ್ಮಲ್ಲಿ ಅನೇಕರು ದೇವರ ಯೋಜನೆಯನ್ನು ಮತ್ತು ಉದ್ದೇಶಗಳನ್ನು ನೆರವೇರಿಸುವದರ ಕುರಿತು ಉತ್ಸಾಹಭರಿತರಾಗಿದ್ದೇವೆ ಆದರೆ ನಮ್ಮೆಲ್ಲರಿಗೂ "ಕೆಲಸವಿದ್ದು" ವಾರದಲ್ಲಿ ಐದು ಅಥವಾ ಆರು ದಿನಗಳು ಅದಕ್ಕೆ ಹೋಗಲೇಬೇಕು. ಕೆಲವೊಂದು ಸಮಯಗಳಲ್ಲಿ, "ಈ ಕೆಲಸದಿಂದ ನಾನು ಹೇಗಾದರೂ ಬಿಡುಗಡೆ ಹೊಂದಿದರೆ, ಯೇಸುವಿನ ಸೇವೆ ಮಾಡುವ ಸ್ವತಂತ್ರ ನನಗಿರುತ್ತದೆ" ಎಂದು ನಾವು ಆಲೋಚಿಸಬಹುದು. ನಮ್ಮ ಪರಲೋಕದ ಕರೆಯುವಿಕೆಯನ್ನು ನೆರವೇರಿಸಲು ನಮ್ಮ "ವೃತ್ತಿ" ಅಥವಾ "ಕೆಲಸ" ಒಂದು ದೊಡ್ಡ ಅಡಚಣೆಯಾಗಿ ಕಂಡು ಬರುತ್ತದೆ. ಇದು ಒಂದು ಬಹಳ ತಪ್ಪಾದ ಮನೋಭಾವವಾಗಿದೆ. ನಾವು ಮನಸ್ಸಿನಲ್ಲಿಟ್ಟುಕೊಳ್ಳಬೇಕಾದ ಸಂಗತಿಯೇನೆಂದರೆ ಭೂಮಿಯ ಮೇಲೆ ಇರುವಷ್ಟು ಕಾಲ ಪೂರ್ಣಾವಧಿ ಸೇವೆಯಲ್ಲಿರುವ ನಾವು ಸಹ-ಕೆಲಸ ಮಾಡಬೇಕು.

ಬೆಂಗಳೂರಿನಲ್ಲಿರುವ ಬಿಷಪ್ ಕಾಟನ್ ಬಾಲಕರ ಸ್ಕೂಲಿನಲ್ಲಿ ಓದುತ್ತಿರುವಾಗ ಸುಮಾರು 12 ವರ್ಷ ಪ್ರಾಯದವನಾಗಿರುವಾಗ ನಾನು "ರಕ್ಷಣೆ" ಹೊಂದಿದೆ. ಸಿಕ್ಕುವ ಪ್ರತಿಯೊಂದು ಅವಕಾಶದಲ್ಲಿ ಆತನ ಬಗ್ಗೆ ಪ್ರಸಂಗಿಸುವದಕ್ಕೆ ಯೇಸುವಿನಲ್ಲಿ ಉರಿಯುತ್ತಿದ್ದೆನು. ಕೆಲವೊಂದು ಸಮಯಗಳಲ್ಲಿ ಪ್ರಸಂಗಿಸಲು ನನಗೊಸ್ಕರ ನಾನೇ ಅವಕಾಶಗಳನ್ನು ಸೃಷ್ಟಿಸಿದೆನು. ನನ್ನ ತರಗತಯಲ್ಲಿ ಎದ್ದು ನಿಂತಿಕೊಂಡು ತರಗತಯಲ್ಲಿರುವ ಎಲ್ಲರಿಗೆ ಯೇಸುವಿನ ಕುರಿತು ಹೇಳಿದನ್ನು ನಾನು ಜ್ಞಾಪಿಸಿಕೊಳ್ಳುವವನಾಗಿದೆ. ಅಕ್ಕಪಕ್ಕದ ಇತರ ಎರಡು ಶಾಲೆಗಳಾದ–ಬಾಲ್ಡ್ ವಿನ್ ಪ್ರೌಢಶಾಲೆ ಮತ್ತು ಕ್ಯಾಥೆಡ್ರಲ್ ಶಾಲೆಗಳಿಗೆ ಸಹ ಯೇಸುವಿನ ಬಗ್ಗೆ ಪ್ರಸಂಗಿಸಲು ಹೋಗುತ್ತಿದ್ದೆನು. ಆದಾಗ್ಯೂ, ಶಾಲೆಗೆ ಹೋಗುವದು ನನ್ನ "ಉದಯೋನ್ಮುಖಿ" ಸೇವೆಗೆ ಒಂದು ದೊಡ್ಡ ಅಡೆತಡೆಯಾಗಿ ಅನ್ನಿಸುತ್ತಿತ್ತು ಮತ್ತು "ವಿಧ್ಯಾಭ್ಯಾಸ" ಎಂದು ಕರೆಯಲ್ಪಡುವ

ಈ ಸಂಗತಿಯು ಆಶೀರ್ವಾದಕ್ಕಿಂತ ಹೆಚ್ಚು ಅಡೆತಡೆಯಾಗಿ ಅನ್ನಿಸುತ್ತಿತ್ತು. "ಓ ದೇವರೆ ಇದರಿಂದ ನನ್ನನ್ನು ಬಿಡುಗಡೆಗೊಳಿಸು. ಕರ್ತನೆ, ಒಂದು ವೇಳೆ ಶಾಲೆಗೆ ಹೋಗುವದರಿಂದ ಮತ್ತು ವಿಧ್ಯಾಭ್ಯಾಸ ಮಾಡುವದರಿಂದ ನನ್ನನ್ನು ಬಿಡಿಸುವದಾದರೆ ನಿನ್ನ ರಾಜ್ಯಕ್ಕೆ ಹೆಚ್ಚಾದದ್ದನ್ನು ಮಾಡಬಹುದು ಮತ್ತು ಹೆಚ್ಚು ಜನರಿಗೆ ಯೇಸುವಿನ ಬಗ್ಗೆ ನಾನು ಹೇಳಬಹುದು" ಎಂಬ– ರಹಸ್ಯವಾದ ಪ್ರಾರ್ಥನೆ ನನ್ನ ಹೃದಯದೊಳಗೆ ಇತ್ತು ಅನ್ನಿಸುತ್ತದೆ. ದೇವರಿಗೆ ಕೃತಜ್ಞತೆ, ಅದರಿಂದ ಆತನು ನನ್ನನ್ನು ಬಿಡಿಸಲಿಲ್ಲ! ನಾನು ಶಾಲಾ ಶಿಕ್ಷಣದ ಸಂಪೂರ್ಣ ಪ್ರಕ್ರಿಯೆಯನ್ನು ಹಾದು ಹೋದೆ ಮತ್ತು ಮುಂದವರೆಯುತ್ತಾ ಇಂಜಿನೀರಿಂಗ್ ಕಾಲೇಜ್ ದಾಟಿದೆನು, ತದನಂತರ ಕಾಲ ಕಳೆದಂತೆ ನಾನು ಯಾಕೆ ವಿಧ್ಯಾಭ್ಯಾಸ ಮಾಡಬೇಕಾಗಿತ್ತು ಎಂದು ಅರ್ಥಮಾಡಿಕೊಳ್ಳಲು ನಾನು ಪ್ರಾರಂಭಿಸಿದೆನು. ದೇವರಿಗೆ ಕೃತಜ್ಞತೆ, ಆತನು ನನಗೆ ವಿಧ್ಯಾಭ್ಯಾಸ ಮಾಡುವದನ್ನು ನಿಲ್ಲಿಸು ಎಂದು ಹೇಳಲಿಲ್ಲ. ಆದರೆ ಒಂದು ಹಂತದಲ್ಲಿ ನಾನು ವಿಧ್ಯಾಭ್ಯಾಸ ಮಾಡುವದು ಮತ್ತು ಶಾಲಾಶಿಕ್ಷಣ ಮಾಡುವದು ದೇವರ ಉದ್ದೇಶಗಳ ಕಡೆಗಿರುವ ನನ್ನ ಪ್ರಗ್ರತಿಗೆ ಅದು ದೊಡ್ಡ ಅಡಚಣೆಯಾಗಿ ಅನ್ನಿಸುತ್ತಿತ್ತು ಎಂಬದನ್ನು ನಾನು ಒಪ್ಪಿಕೊಳ್ಳಬೇಕು. ನನ್ನ ಸತ್ಯವೇದವನ್ನು ಓದುವದು, ಪ್ರಾರ್ಥಿಸುವದು, ಸಾಕ್ಷಿಕರಿಸುವದು ಮತ್ತು ಪ್ರಸಂಗಿಸುವದನ್ನು ಹೋಲಿಸುವಾಗ ಆ ಎಲ್ಲಾ ಪುಸ್ತಕಗಳನ್ನು ಓದುವದು, ನನ್ನ ಮನೆಕೆಲಸಗಳನ್ನು ಮಾಡುವದು ಮತ್ತು ಆ ಎಲ್ಲಾ ಪರೀಕ್ಷೆಗಳನ್ನು ಬರೆಯುವದು ಎಷ್ಟೋ ಅಪ್ರಾಮುಖ್ಯವೆನ್ನಿಸುತ್ತಿತ್ತು. ನಂತರ ನನಗ ಅರಿವಾಯಿತು, ಇದು ಕೆಲಸದ ಕುರಿತಾದ ತಪ್ಪಾದ ಮನೋಭಾವ ಎಂಬದಾಗಿ.

## ಕೆಲಸ ಒಂದು ಗುಲಾಮಗಿರಿ

ಕೆಲವು ಜನರು ಕೆಲಸವನ್ನು ಗುಲಾಮಗಿರಿಯಾಗಿ ಪರಿಗಣಿಸುತ್ತಾರೆ. ಕೆಲಸದಲ್ಲಿ ಜೀತಕಾರ್ಮಿಕರಂತೆ ಅಥವಾ ಗುಲಾಮರಂತೆ ಅವರಿಗೆ ಭಾಸವಾಗುತ್ತದೆ. "ನನಗೆ ಇಷ್ಟ ಇದ್ದರೂ ಇಲ್ಲದಿದ್ದರೂ ನಾನು ಬೆಳಗ್ಗೆ ಎದ್ದೇಳಬೇಕು ಮತ್ತು ಕೆಲಸಕ್ಕೆ ಹೋಗಬೇಕು" ಕೆಲಸದ ಕ್ಷೇತ್ರದಲ್ಲಿರುವ ಕೆಲವು ನಿಯಮಗಳು ಸಂಗತಿಗಳನ್ನು ಇನ್ನೂ ಕೆಟ್ಟದಾಗಿ ಮಾಡುತ್ತವೆ ಎಂದು ಎಡಬಿಡದೆ ಅವರು ಆಲೋಚಿಸುವವರಾಗಿದ್ದಾರೆ. ನಾವು ಎಲ್ಲಿ ಕೆಲಸ ಮಾಡುತ್ತೇವೋ ಅದನ್ನು ಅವಲಂಭಿಸಿ ನಾವು ಬೆಳಿಗ್ಗೆ ೯ ಘಂಟೆಗೆ ಅಲ್ಲಿರಬೇಕಾಗಬಹುದು ಮತ್ತು

ಸಂಜೆ 6 ಅಥವಾ 7 ಘಂಟೆಯ ತನಕ ಕೆಲಸ ಮಾಡ ಬೇಕಾಗಬಹುದು. ಕೆಲಸದ ಸ್ಥಳದಲ್ಲಿ ಕೆಲವು ನಿರ್ಧಿಷ್ಟವಾದ ಸಂಗತಿಗಳನ್ನು ಮಾಡಲು ಮಾತ್ರ ಸ್ವಾತ್ರಂತ ಇರಬಹುದು ಮತ್ತು ಇತರ ಸಂಗತಿಗಳನ್ನು ಮಾಡಲು ಅನುಮತಿ ಇಲ್ಲದಿರಬಹುದು. ಈ ಕಾರಣದಿಂದಾಗಿ ಕೆಲವರು ತಮ್ಮ ಕೆಲಸಗಳನ್ನು ಗುಲಾಮಗಿರಿಯಾಗಿ ಕಾಣುತ್ತಾರೆ. ನಮ್ಮಲ್ಲಿ ಕೆಲವರು ನಿಯಮಗಳಿಗೂ ಮತ್ತು ಅಧಿಕಾರಿಗಳಿಗೂ ಎರಡಕ್ಕೂ ವಿರುದ್ಧವಾಗಿ ಬಂಡಾಯ ಏಳಬಹುದು.

ಕೆಲಸದ ಕ್ಷೇತ್ರದಲ್ಲಿರುವ ನಿಯಮಗಳು ಗುಲಾಮಗಿರಿಯಲ್ಲಾ ಎಂದು ನಾವು ಅರ್ಥಮಾಡಿಕೊಳ್ಳಬೇಕು ಸತ್ಯಾಂಶವೇನೆಂದರೆ ಅದು ಶಿಸ್ತಿಗೆ ದಾರಿ ಮಾಡಿ ಕೊಡುತ್ತದೆ. ಗುಲಾಮಗಿರಿಗೂ ಮತ್ತು ಶಿಸ್ತಿಗೂ ಇರುವ ವ್ಯತ್ಯಾಸವನ್ನು ನಾವು ಕಾಣಬೇಕು. ಕ್ರಿಸ್ತನಲ್ಲಿ ನಮಗೆ ಸ್ವಾತಂತ್ರ್ಯ ಮತ್ತು ಬಿಡುಗಡೆ ಇದೆ (ಗಲಾತ್ಯದವರಿಗೆ 2:4; ಗಲಾತ್ಯದವರಿಗೆ 5:1; 2 ಕೊರಿಂಥದವರಿಗೆ 3:17). ಆದರೆ ಕ್ರಿಸ್ತನಲ್ಲಿ ನಮಗಿರುವ ಸ್ವಾತಂತ್ರ್ಯಕ್ಕ ಮೇರೆಗಳು ಸಹ ಇವೆ ಎಂಬದನ್ನು ನಾವು ಅರ್ಥ ಮಾಡಿಕೊಳ್ಳಬೇಕು (ಗಲಾತ್ಯದವರಿಗೆ 5:13). ಆದದರಿಂದ ನಮಗೆ ಇಷ್ಟ ಇರುವದನ್ನೆಲ್ಲಾ ನಾವು ಮಾಡಲು ಆಗುವದಿಲ್ಲ. ಹಾಗಾಗಿ ಕೆಲಸವನ್ನು ಒಂದು ಗುಲಾಮಗಿರಿಯಾಗಿ ಕಾಣಬಾರದು, ಆದರೆ ಒಬ್ಬನನ್ನು ಶಿಸ್ತುಗೊಳಿಸುವ ಒಂದು ಅವಕಾಶವಾಗಿ ಕಾಣಬೇಕು.

## ಕೆಲಸ ಒಂದು ಅನಿವಾರ್ಯತೆಯ ದುಷ್ಟತನ

ಕೆಲವರು ಕೆಲಸವನ್ನು ಅನಿವಾರ್ಯತೆಯ ದುಷ್ಟತನ–ಬಿಲ್ಲುಗಳನ್ನು ಪಾವತಿಸುವದಕ್ಕೆ ಮಾಡಲೇಬೇಕಾದ ಒಂದು ಸಂಗತಿಯೆಂದು ಪರಿಗಣಿಸುತ್ತಾರೆ. ಖಂಡಿತವಾಗಲು, ನಾವು ಊಟ ಮಾಡುವದಕ್ಕೆ ಮತ್ತು ನಮ್ಮ ಕುಟುಂಬದ ಅಗತ್ಯತೆಗಳನ್ನು ಪೂರೈಸುವದಕ್ಕೆ ನಾವು ಕೆಲಸ ಮಾಡಲೇ ಬೇಕು. ಹೇಗಿದ್ದರೂ, ಅನೇಕರು ತಮ್ಮ ಕೆಲಸವನ್ನು ಅನಂದಿಸುವದಿಲ್ಲ ಬದಲಾಗಿ ದೂರುತ್ತಾರೆ ಮತ್ತು ಗುಣಗುಟ್ಟುತ್ತಾರೆ. ವಿಶ್ವಾಸಿಗಳಾದ ನಾವು ನಮ್ಮ ಕೆಲಸದಲ್ಲಿ ಆನಂದಿಸುವದನ್ನು ಕಲಿತುಕೊಳ್ಳಬೇಕು ಮತ್ತು ಅದನ್ನು ಒಂದು ಅನಿವಾರ್ಯದ ದುಷ್ಟತನ ಎಂಬದಾಗಿ ಪರಿಗಣಿಸುವದನ್ನು ನಿಲ್ಲಿಸಬೇಕು.

## ಕೆಲಸವೇ ಆರಾಧನೆ

ಕೆಲವರು ಕೆಲಸ, ಕೆಲಸ ಮಾಡುತ್ತಲ್ಲಿರುತ್ತಾರೆ ಮತ್ತು ಕೆಲಸವೇ ಆರಾಧನೆ ಎಂಬ ತಪ್ಪುಗ್ರಹಿಕೆಯಲ್ಲಿ ಕೆಲಸ ಮಾಡುತ್ತಿರುತ್ತಾರೆ. ಈ ರೀತಿಯಾದಂತಹ ಮನೋಭಾವವು ನಮ್ಮ ಕೆಲಸದ ಸಂಸ್ಕೃತಿಯ ಮೇಲೆ ಆಳಲು ಪ್ರಾರಂಭಿಸಿವೆ. ಕೆಲಸವೇ ಆರಾಧನೆಯಲ್ಲಾ ಏಕೆಂದರೆ ಆರಾಧನೆ ಎಂಬುದು ದೇವರೊಂದಿಗಿರುವ ಅನ್ಯೋನ್ಯತೆಯಾಗಿದೆ. ನೀವು ದೇವರ ಬಗ್ಗೆ ಆಲೋಚಿಸದೆ ಕೆಲಸ ಮಾಡಬಹುದು.

# 3

# ಕೆಲಸದ ಬಗ್ಗೆ ಒಬ್ಬ ವಿಶ್ವಾಸಿಯ ದೃಷ್ಟಿಕೋನ

ಕೆಲಸ ಕುರಿತು ವಿಶ್ವಾಸಿಗಳಾದ ನಮ್ಮ ದೃಷ್ಟಿಕೋನ ಏನಾಗಿರಬೇಕು? ದೇವರು ನಮಗೆ ಕೊಟ್ಟಿರುವ ಕೆಲಸ, ಉದ್ಯೋಗ ಮತ್ತು ವೃತ್ತಿ ಜೀವನವನ್ನು ನಾವು ಹೇಗೆ ಕಾಣಬೇಕು? ಪ್ರತಿಯೊಬ್ಬ ವಿಶ್ವಾಸಿಗೆ ಪ್ರಾಮುಖ್ಯವೆಂಬದಾಗಿ ನಾನು ಪರಿಗಣಿಸುವ ಮೂರು ದೃಷ್ಟಿಕೋನಗಳು ಇಲ್ಲಿವೆ.

## ಕೆಲಸ ಒಂದು ವಾಹನ

ನಮ್ಮ ಕೆಲಸ, ವೃತ್ತಿ ಮತ್ತು ಉದ್ಯೋಗವು ಭೂಮಿಯ ಮೇಲೆ ದೇವರ ಉದ್ದೇಶಗಳನ್ನು ಹೊತ್ತುಕೊಂಡು ಹೋಗುವ ವಾಹನವಾಗಿದೆ. ಇದು ಭೂಮಿಯ ಮೇಲೆ ದೇವರ ಉದ್ದೇಶಗಳನ್ನು ಬಿಡುಗಡೆ ಮಾಡುವ ವಾಹನವಾಗಿದೆ. ಮತ್ತೊಂದು ಮಾತಿನಲ್ಲಿ ಹೇಳಬೇಕಾದರೆ ಕೆಲಸವು ಒಬ್ಬ ವ್ಯಕ್ತಿಯ ಜೀವನದಲ್ಲಿ ದೇವರ ಚಿತ್ತ ಮತ್ತು ಉದ್ದೇಶಗಳನ್ನು ಕಾರ್ಯಗತಗೊಳಿಸಲು ನೆರವಾಗಲು ದೇವರು ಅನುಗ್ರಹಿಸಿದ ಉಪಕರಣವಾಗಿದೆ. ಕೆಲವರು ಪೂರ್ಣಾವಧಿ ಸೇವೆಗೆ ಕರೆಯಲ್ಪಟ್ಟಿದ್ದೀರಿ ಎಂಬದಾಗಿ ನಾನು ಅರ್ಥಮಾಡಿಕೊಂಡಿದ್ದೇನೆ, ಆದರೆ ಒಂದು ಅರ್ಥದಲ್ಲಿ ಪೂರ್ಣಾವಧಿ ಸೇವೆ ಸಹ ಒಂದು "ಕೆಲಸ"ವಾಗಿದೆ.

## ಕೆಲಸವು ಒಂದು ಕಾರ್ಯತಂತ್ರವಾಗಿದೆ

ಆತನ ಚಿತ್ತ ಮತ್ತು ಉದ್ದೇಶವನ್ನು ನೆರವೇರಿಸಲು ಸಾಧ್ಯವಾಗುವಂತೆ ನಮ್ಮ ಕೆಲಸವು ದೇವರ ಕಾರ್ಯತಂತ್ರದ ಒಂದು ಭಾಗವಾಗಿದೆ ಎಂದು ನಾವು ದೃಷ್ಟಿಸಲು ಪ್ರಾರಂಭಿಸಬೇಕು ಮತ್ತು ಅರ್ಥಮಾಡಿಕೊಳ್ಳಬೇಕು. ಉದಾಹರಣೆಗೆ, ಒಬ್ಬ ವಿಶ್ವಾಸಿಯಾಗಿ, ಕರ್ತನಿಗಾ ಜನರನ್ನು ಗೆದ್ದುಕೊಳ್ಳುವ ಒಂದು ದೊಡ್ಡ ವೈರಾಗ್ಯ ನಿಮಗಿರಬಹುದು. ನಿಮ್ಮ ಉದ್ಯೋಗ ಮತ್ತು ವೃತ್ತಿ ಜೀವನವು ನೀವು ಎಂದಿಗೂ ಸಂಧಿಸಲು ಆಗದಂತಹ ಜನರ ಸಂಪರ್ಕಗಳನ್ನು ತೆಗೆದುಕೊಂಡು ಬರುತ್ತದೆ. ಈಗ ನೀವು ನಿಮ್ಮ ಕೆಲಸವನ್ನು ಒಂದು ದೈವಿಕ

ಕಾರ್ಯತಂತ್ರ ಎಂದು ಪರಿಗಣಿಸಬೇಕು. ಆತನು ಕ್ರಿಸ್ತನನ್ನು ಯಾರೊಂದಿಗೆ ನೀವು ಹಂಚಿಕೊಳ್ಳಬೇಕೆಂಬದಾಗಿ ಬಯಸುತ್ತಾನೋ ಅಂತಹ ಜನರೊಂದಿಗಿ ನಿಮ್ಮನ್ನು ಕಾರ್ಯತಂತ್ರಾತ್ಮಕವಾಗಿ ಸಂಪರ್ಕಿಸಲು ದೇವರು ನಿಮ್ಮ ವೃತ್ತಿಯನ್ನು ಉಪಯೋಗಿಸಿಕೊಳ್ಳುತ್ತಿದ್ದಾನೆ. ನಿಮ್ಮ ಕೆಲಸವು ನಿಮ್ಮ "ವೇದಿಕೆಯಾಗಿದೆ" ಹಾಗೂ ನೀವು ಸಂಭಾಷಿಸುವ ಜನರು ನಿಮ್ಮ ಸೇವಾ "ಪ್ರದೇಶವಾಗಿದೆ."

## ಕೆಲಸವು ಒಂದು ಸಿದ್ಧತೆಯ ಪ್ರಕ್ರಿಯೆಯಾಗಿದೆ

ಕೆಲಸವು ಒಬ್ಬರು ಹಣವನ್ನು ಗಳಿಸುವ ಸ್ಥಳ ಮಾತ್ರವಲ್ಲ ಆದರೆ ದೇವರು ನಮ್ಮ ಸ್ವಭಾವವನ್ನು ಕಟ್ಟುವ ಸ್ಥಳವು ಸಹ ಆಗಿದೆ. ಇದು ನಮ್ಮ ಸಿದ್ಧತೆಯ ಒಂದು ಭಾಗವು ಸಹ ಆಗಿದೆ. ನಾವು ಅನೇಕಾವರ್ತಿ ಸ್ವಭಾವವು ಕಟ್ಟಲ್ಪಡುವದು ಕೇವಲ ಭಾನುವಾರ ಶಾಲೆಯಲ್ಲಿ, ಸಭೆಯಲ್ಲಿ ಅಥವಾ ಸತ್ಯವೇದ ಶಾಲೆಯಲ್ಲಿ ಎಂದು ಆಲೋಚಿಸುತ್ತೇವೆ ಆದರೆ ದೇವರು ಎಲ್ಲಿಬೇಕಾದರೂ ನಮ್ಮ ಸ್ವಭಾವವನ್ನು ಕಟ್ಟಲು ಸಾಧ್ಯ. ಒಂದು ದಿನದ 24 ತಾಸುಗಳು ನಮ್ಮ ಜೀವಿತಗಳಲ್ಲಿ ಆತನು ಕಾರ್ಯ ಮಾಡುವವನಾಗಿದ್ದಾನೆ.

ನಮ್ಮ ಕೆಲಸದ ಸ್ಥಳಗಳಲ್ಲಿ, ಜನರೊಂದಿ ಹೇಗೆ ಸಂಬಂಧಿಸುವದು, ವಿವಿಧ ಪರಿಸ್ಥಿತಿಗಳಿ ಹೇಗೆ ಪ್ರತಿಕ್ರಿಯಿಸುವದು, ದೈವಿಕ ಜ್ಞಾನವನ್ನು ಪಡಕೊಳ್ಳುವದು ಮತ್ತು ಸಮಸ್ಯೆಗಳನ್ನು ಪರಿಹರಿಸುವದನ್ನು ದೇವರು ನಮಗೆ ಕಲಿಸಿಕೊಡಲು ಸಾಧ್ಯ. ನಮ್ಮಲ್ಲಿ ಕೆಲವರಿಗೆ ನಾವು ಕೆಲಸ ಮಾಡುವ ಸ್ಥಳಗಳಲ್ಲಿ ಜನರು ನಮ್ಮ ಶರೀರದಲ್ಲಿ ಮುಳ್ಳುಗಳ ಹಾಗೆ, ನಾವು ಸಂಬಂಧಿಸಲಿಕ್ಕಾಗದೆ ಇರುವ ಜನರಾಗಿ ಕಂಡುಬರಬಹುದು ಆದರೆ ದೇವರು ನಮ್ಮ ಕೆಲಸದ ಸ್ಥಳದ ಮಧ್ಯದಲ್ಲಿ ನಮ್ಮ ಸ್ವಭಾವವನ್ನು ಅಭಿವೃದ್ಧಿ ಪಡಿಸಲು ಸಾಧ್ಯ. ಜೊತೆಗೆ ನಮ್ಮ ಕೆಲಸ ಸ್ಥಳಗಳಲ್ಲಿ ತನ್ನ ರಾಜ್ಯದ ವಿಸ್ತರಣೆಗಾಗಿ ದೇವರು ಉಪಯೋಗಿಸಬಹುದಾದ ಹೊಸ ಕೌಶಲ್ಯಗಳ ಕಲಿಕೆ ಮತ್ತು ನಮ್ಮ ಸಾಮರ್ಥ್ಯಗಳನ್ನು ಅಭಿವೃದ್ಧಿ ಪಡಿಸಿಕೊಳ್ಳಬಹುದಾದ ಅವಕಾಶಗಳನ್ನು ನಾವು ಹೊಂದಿರಬಹುದು. ಉದಾಹರಣೆಗೆ, ನಿಮ್ಮ ಕೆಲಸದ ಸ್ಥಳದಲ್ಲಿ ನಾಯಕತ್ವದ ಕೌಶಲ್ಯಗಳನ್ನು ನೀವು ಕಲಿಯಬಹುದು ಮತ್ತು ಆ ಕೌಶಲ್ಯಗಳನ್ನು ದೇವರು ನಿಮ್ಮ ಸ್ಥಳಿಯ ಸಭೆಯ ನಿರ್ದಿಷ್ಟವಾದ ಸೇವೆಯಲ್ಲಿ ಉಪಯೋಗಿಸಬಹುದು, ಹೀಗೆ ಅಲ್ಲಿ ನಿಮ್ಮನ್ನು ಆಶೀರ್ವಾದ ನಿಧಿಗಳಾಗಿ ಮಾಡುವದು.

ಸತ್ಯವೇದದಲ್ಲಿರುವ ಕೆಲವು ಪರುಷರನ್ನು ಪರಿಗಣಿಸೋಣ.

## ಯೋಸೆಫ

### *ಒಂದು ಪ್ರವಾದನಾತ್ಮಕ ಕನಸ್ಸು ಮತ್ತು ಯೋಜನೆಯನ್ನು ನೆರವೇರಿಸುವದು*

ಯೋಸೆಫನನ್ನು ಆಲೋಚಿಸಿರಿ. ಯೋಸೆಫನಿಗೆ ದೇವರಿಂದ ಕೊಡಲ್ಪಟ್ಟ ದರ್ಶನವಿತ್ತು, ದೇವರಿಂದ ಕೊಡಲ್ಪಟ್ಟ ಕನಸ್ಸಿತ್ತು ಆದರೆ ಅವನು ಎಲ್ಲವನ್ನು ಬಿಟ್ಟುಬಿಟ್ಟು "ಪೂರ್ಣಾವಧಿ ಸೇವೆಯ" ಕಡೆಗೆ ಹೋಗಲಿಲ್ಲ. ಯೋಸೆಫನು ದೇವರ ಸಿದ್ಧತೆಯ ಪ್ರಕ್ರಿಯೆಯನ್ನು ಹಾದು ಹೋದನು, ಅವನು ಪೋಟಿಫರನ ಮನೆಯಲ್ಲಿ ಕೆಲಸ ಮಾಡಲು ಮತ್ತು ಅಲ್ಲಿ ಅವನಿಗೆ ನಿಯೋಜಿಸಲಾದ ಏನೇ ಮಾಡಲು ಒತ್ತಾಯಿಸಲ್ಪಟ್ಟನು, ತನ್ನದಲ್ಲದ ತಪ್ಪಿಗೆ ಅವನನ್ನು ಸೆರೆಮನೆಗೆ ಎಸೆಯಲಾಯಿತು ಮತ್ತು ಸೆರೆಮನೆಯಲ್ಲೂ ಸಹ ಅವನು ಕೆಲಸ ಮಾಡಬೇಕಾಯಿತು. ಇತರ ಎಲ್ಲಾ ಕೈದಿಗಳ ಮೇಲೆ ಅವನನ್ನು ಉಸ್ತುವಾರಿಯಾಗಿ ನೇಮಿಸಲಾಯಿತು. ನಂತರ ಅವನು ಈಜಿಪ್ಟಿನ ಪ್ರಧಾನ ಮಂತ್ರಿಯಾಗಲು ಎಬ್ಬಿಸಲಾಯಿತು ಮತ್ತು ಅಲ್ಲಿಯೂ ಸಹ ಅವನು ಕೆಲಸ ಮಾಡಬೇಕಾಯಿತು. ಅವನು ಪೂರ್ಣಾವಧಿ ಸೇವೆಗೆ ಕರೆಯಲ್ಪಡಲಿಲ್ಲ ಆದರೂ ಸಹ ದೇವರು ತನ್ನ ದೈವಿಕ ಉದ್ದೇಶಗಳನ್ನು ನೆರವೇರಿಸುವದಕ್ಕಾಗಿ ಅವನನ್ನು ನೇಮಿಸಿದನು ಮತ್ತು ಅವನನ್ನು ಇರಿಸಿದನು. ಯೋಸೆಫನು ಈಜಿಪ್ಟಿನ ಪ್ರಧಾನಮಂತ್ರಿಯಾಗಿ ಕೆಲಸ ಮಾಡಿದನು ಮತ್ತು ಯೋಸೆಫನು ಬಾಲಕನಾಗಿರುವಾಗ ಆತನು ಕೊಟ್ಟ ಕನಸ್ಸನ್ನು ನೆರವೇರಿಸಲು ದೇವರು ಅದನ್ನು ಉಪಯೋಗಿಸಿದನು. ಒಂದು ವೇಳೆ ಯೋಸೆಫನು ಪ್ರಧಾನಮಂತ್ರಿಯ ಕೆಲಸವನ್ನು ಬಿಟ್ಟುಬಿಟ್ಟು ನಿವೃತ್ತಿ ಪಡಕೊಂಡು ಕಾಡಿನಲ್ಲಿ ಎಲ್ಲಿಯಾದರು ಮಠಕ್ಕೆ ಏನಾಗುತಿತ್ತು? ದೇವರು ಅವನಿಗೆ ಅನುಗ್ರಹಿಸಿದ ಕನಸ್ಸು ನೆರವೇರುವದನ್ನು ಅವನು ಎಂದಿಗೂ ಕಾಣುತ್ತಿರಲಿಲ್ಲ!

ಈ ಸತ್ಯಾಂಶವನ್ನು ಪರಿಗಣಿಸಿರಿ. ಯೋಸೆಫನಿಗಿಂತ ಅನೇಕ ವರ್ಷಗಳಿಗೆ ಮುಂಚೆ ದೇವರು ಅಬ್ರಹಾಮನೊಂದಿಗೆ ಮಾತನಾಡಿ ಅವನ ಸಂತತಿಯನ್ನು ಅವರರಿಯದ ಭೂಪ್ರದೇಶಕ್ಕೆ ತೆಗೆದುಕೊಂಡು ಹೋಗುವನು ಎಂಬದಾಗಿ ಹೇಳಿದ್ದನು. *"ಆಗ ಯೆಹೋವನು ಅವನಿಗೆ - ನೀನು ಚೆನ್ನಾಗಿ ತಿಳಿಯತಕ್ಕದ್ದೇನಂದರೆ - ನಿನ್ನ ಸಂತತಿಯವರು ಅನ್ಯದೇಶದಲ್ಲಿ ಕೆಲವು*

*ಕಾಲವಾಸವಾಗಿದ್ದು ಆ ದೇಶದವರಿಗೆ ದಾಸರಾಗುವರು. ನಾನೂರು ವರುಷ ಆ ದೇಶದವರಿಂದ ಬಾಧೆಪಡುವರು. ಅವರಿಂದ ಬಿಟ್ಟೀಕೆಲಸ ಮಾಡಿಸಿಕೊಂಡ ಜನಾಂಗವನ್ನು ನಾನು ಶಿಕ್ಷಿಸಿದ ನಂತರ ಅವರು ಬಹಳ ಆಸ್ತಿವಂತರಾಗಿ ಆ ದೇಶದಿಂದ ಬಿಡುಗಡೆಯಾಗಿ ಬರುವರು"* (ಆದಿಕಾಂಡ 15:13,14). ದೇವರು ಯೋಸೆಫನಿಗೆ ಕೊಡಲ್ಪಟ್ಟ ದೈವಿಕ ಕೌಶಲ್ಯ ಮತ್ತು "ಉದ್ಯೋಗಿಕ" ವೃತ್ತಿಜೀವನವನ್ನು ಒಂದು ವಾಹನವನ್ನಾಗಿ ಅವನನ್ನು ಸ್ಥಿರಪಡಿಸಲು ಹಾಗೂ ತನ್ನ ಈ ಪ್ರವಾದನಾತ್ಮಕ ಯೋಜನೆಯನ್ನು ನೆರವೇರಿಸುವದಕ್ಕೆ ಉಪಯೋಗಿಸಿದನು.

ನಮ್ಮಲ್ಲಿ ಅನೇಕರಿಗೆ ಸಮುದಾಯಗಳಿಗೆ, ಪಟ್ಟಣಗಳಿಗೆ ಮತ್ತು ರಾಷ್ಟ್ರಗಳಿಗೆ ಇರುವ ದೇವರ ಪ್ರವಾದನಾತ್ಮಕ ಯೋಜನೆಗಳು ತಿಳಿದಿಲ್ಲ. ಆತನ ಬಳಿಯಲ್ಲಿ *'ಕೈರೋಸ್'* ಇದೆ (*ಕೈರೋಸ್* [ಗ್ರೀಕ್] ಅನ್ನು ವಿಶೇಷ ಘಟನೆಗಳು, ಸೂಕ್ತ ಕ್ಷಣಗಳು, ನಿರ್ಣಾಯಕ ಘಟನೆಗಳು ಮತ್ತು ಸಮಯದ ಬದಲಾವಣೆಗಳನ್ನು ಉಲ್ಲೇಖಿಸಿ ಬಳಸಲಾಗುತ್ತದೆ) ಕ್ಷಣಗಳು ಮತ್ತು ದೈವಿಕ ಪ್ರವೇಶ ಬಿಂದುಗಳು (ಅವಲಂಭಿಸಿದೆ) ಅಲ್ಲಿ ಸಮುದಾಯಗಳು, ನಗರಗಳು ಮತ್ತು ರಾಷ್ಟ್ರಗಳಿಗೆ ಅವಕಾಶಗಳ ಬಾಗಿಲು ತೆರೆಯಲಾಗುತ್ತದೆ. ದೇವರು "ಯೋಸೆಫರನ್ನು" ನೋಡುತ್ತಿದ್ದಾನೆ, ಅಂತವರನ್ನು ಸ್ಥಿರಪಡಿಸಿ ಆತನು ಅವರ ಕೌಶಲ್ಯಗಳನ್ನು ಮತ್ತು ಔದ್ಯೋಗಿಕ ಸಾಮರ್ಥ್ಯಗಳನ್ನು ಸಮುದಾಯಗಳಿಗೆ, ಪಟ್ಟಣಗಳಿಗೆ ಮತ್ತು ರಾಷ್ಟ್ರಗಳಿಗೆ ತನ್ನ ಪ್ರವಾದನಾತ್ಮಕ ಯೋಜನೆಗಳನ್ನು ನೆರವೇರಿಸುವದಕ್ಕೆ ಉಪಯೋಗಿಸುವವನಾಗಿದ್ದಾನೆ.

## ದಾವೀದ, ದಾನಿಯೇಲ ಮತ್ತು ಪೌಲ

### *ಲೌಕಿಕ ಮತ್ತು ಆತ್ಮೀಕತೆಯ ಸಮನ್ವಯತೆ*

ದಾವೀದನು ಒಬ್ಬ ಕೀರ್ತನೆಗಾರನು, ಒಬ್ಬ ಪ್ರವಾದಿ ಮತ್ತು ಒಬ್ಬ ಅರಸನಾಗಿದ್ದನು. ದಾನಿಯೇಲನು ಒಬ್ಬ ಪ್ರವಾದಿ ಮಾತ್ರ ಆಗಿರಲಿಲ್ಲ ಆದರೆ ಒಬ್ಬ ಪ್ರಧಾನ ಮಂತ್ರಿಯಾಗಿ ಸರ್ಕಾರವನ್ನು ಸಹ ನಡೆಸುತ್ತಿದ್ದನು ಮತ್ತು ಅರಸನ ವ್ಯವಹಾರವನ್ನು ನೋಡಿಕೊಳ್ಳುತ್ತಿದ್ದನು. ಪೌಲನ ಕುರಿತು ಆಲೋಚಿಸಿರಿ. ಹೊಸ ಒಡಂಬಡಿಕೆಯ ಬಹುತೇಕ ಭಾಗಗಳನ್ನು ಬರೆದ ಶ್ರೇಷ್ಟ ಅಪೋಸ್ತಲನನ್ನಾಗಿ ನಾವು ಅವನನ್ನು ಅರಿತ್ತಿದ್ದೇವೆ. ಅವನು ಹೋದಂತ

ಕನಿಷ್ಟ ಮೂರು ಪಟ್ಟಣಗಳು ಎಫೆಸ, ಕೊರಿಂಥ ಮತ್ತು ಥೆಸಲೋನಿಕದಲ್ಲಿ ತನ್ನ ಅಗತ್ಯತೆಗಳನ್ನು ನೋಡಿಕೊಳ್ಳುವದಕ್ಕಾಗಿ ಮತ್ತು ತನ್ನ ಸೇವಾ ತಂಡದ ಅಗತ್ಯೆತೆಗಳನ್ನು ನೋಡಿಕೊಳ್ಳುವದಕ್ಕಾಗಿ ಅವನು ಕೆಲಸ ಮಾಡಿದನು ಎಂದು ನಿರ್ಣಯಿಸಲು ಸಾಕಷ್ಟು ಪುರಾವೆಗಳಿವೆ. ಅವನು ಸೇವೆ ಮಾಡುತ್ತಿದ್ದ ಜನರಿಗೆ ಭಾರವಾಗದೆ ಇರಲು ಅವನು ತನ್ನ ಸ್ವಂತ ಕೈಗಳಲ್ಲಿ ಕೆಲಸ ಮಾಡಿದನು ಮತ್ತು ತನ್ನ ಸ್ವಂತ ಅಗತ್ಯತೆಗಳನ್ನು ನೋಡಿಕೊಂಡನು.

ದಾವೀದ, ದಾನಿಯೇಲ ಮತ್ತು ಪೌಲನಲ್ಲಿ ಒಂದು ಸಮನ್ವಯತೆಯನ್ನು ನೋಡುತ್ತೇವೆ–"ಲೌಕಿಕ" ಮತ್ತು "ಆತ್ಮಿಕತೆಯ"–ಒಂದು ಮಿಶ್ರಣ. ಕೆಲಸವು ಲೌಕಿಕವಾದದ್ದು ಮತ್ತು ಕೆಲಸದಿಂದ ಪ್ರತ್ಯೇಕವಾಗಿ ದೇವರೊಂದಿಗೆ ನಡೆಯುವದು ಆತ್ಮಿಕವಾದದ್ದು ಎಂದು ಬೇಧ ಮಾಡದೆ ಇರುವ ಸ್ಥಳಕ್ಕೆ ನಾವು ಬರಬೇಕು. ನಿಮ್ಮ ಕೆಲಸವನ್ನು ದೇವರೊಂದಿಗೆ ನಡೆಯುವ ಒಂದು ಭಾಗವನ್ನಾಗಿ ನೋಡಿರಿ. ಇದು ನಿಮ್ಮ ಜೀವಿತಕ್ಕಿರುವ ದೇವರ ಯೋಜನೆಯ ಭಾಗವಾಗಿದೆ. ದಾವೀದ, ದಾನಿಯೇಲ ಮತ್ತು ಪೌಲ ಕೆಲಸ ಮಾಡಿದ್ದರಿಂದ ತಮ್ಮ ಅಭಿಷೇಕವನ್ನು ಕಳೆದುಕೊಳ್ಳಲಿಲ್ಲ! ನಿಮ್ಮ ಕೆಲಸವು "ಆತ್ಮಿಕವಾದದ್ದು" ಅದಕ್ಕೆ ಸರಳವಾದ ಕಾರಣ ದೇವರು ಕೆಲಸ ಮಾಡುವವನಾಗಿದ್ದಾನೆ.

# 4
# ವಿಶ್ವಾಸಿಗಳು ಕೆಲಸ ಮಾಡಲು ಆಜ್ಞಾಪಿಸಲ್ಪಟ್ಟಿದ್ದಾರೆ

ಹೊಸ ಒಡಂಬಡಿಕೆಯಲ್ಲಿ, ಕರ್ತನಾದ ಯೇಸು ವಿಶ್ವಾಸಿಗಳಿಗೆ ಇಡೀ ಲೋಕಕ್ಕೆ ಹೋಗಬೇಕು ಮತ್ತು ಶುಭವಾರ್ತೆಯನ್ನು ಪ್ರಸಂಗಿಸಬೇಕು ಎಂಬ ಮಹಾ ಆದೇಶವನ್ನು ಕೊಟ್ಟನು. ಹೊಸ ಒಡಂಬಡಿಕೆಯ ಸಭೆಯು ರಕ್ಷಿಸಲ್ಪಟ್ಟ ಪ್ರತಿಯೊಬ್ಬ ವ್ಯಕ್ತಿ "ಲೋಕದಲ್ಲಿ" ಪ್ರತಿಯೊಂದರಲ್ಲಿ ಭಾಗವಹಿಸದೆ ಕೇವಲ ಸುವಾರ್ತೆಯನ್ನು ಪ್ರಸಂಗಿಸುತ್ತಾ ಹೋಗಬೇಕೆಂಬ ವಿಧಾನವನ್ನು ಬಳಸಬಹುದಿತ್ತು. ಆದರೆ ಅಪೋಸ್ತಲನಾದ ಪೌಲನು ವಿಶ್ವಾಸಿಗಳಿಗೆ ಏನು ಉಪದೇಶಿಸಿದನು ಎಂಬುದನ್ನು ಗಮನಿಸುವದು ಆಸಕ್ತಿಭರಿತವಾದಂತದ್ದಾಗಿದೆ.

## ನಿಮ್ಮ ಸ್ವಂತ ಕೈಗಳಲ್ಲಿ ಕೆಲಸ ಮಾಡಿರಿ

**ಎಫೆಸದವರಿಗೆ 4:28**

**“ಕಳವು ಮಾಡುವವನು ಇನ್ನು ಮೇಲೆ ಕಳವುಮಾಡದೆ ಕೈಯಿಂದ ಯಾವದೊಂದು ಒಳ್ಳೇ ಉದ್ಯೋಗವನ್ನು ಮಾಡಿ ದುಡಿಯಲಿ; ಆಗ ಕಷ್ಟದಲ್ಲಿರುವವರಿಗೆ ಕೊಡುವದಕ್ಕೆ ಅವನಿಂದಾಗುವದು”.**

ಕಳವು ಮಾಡುವವನು ಇನ್ನು ಎಷ್ಟು ಮಾತ್ರಕ್ಕೂ ಕಳವು ಮಾಡದೆ ಇರಲಿ ಆದರೆ ಅವನು ತನ್ನ ಸ್ವಂತ ಕೈಯಿಂದ ಕೆಲಸ ಮಾಡಲಿ. ಒಳ್ಳೆಯದು ಯಾವುದೋ ಮತ್ತು ಸರಿಯಾದದ್ದು ಯಾವುದೋ ಅದನ್ನು ಮಾಡುತ್ತಾ ತನ್ನ ಸ್ವಂತ ಕೈಯಿಂದ ದುಡಿಯುವಾಗ ತನ್ನ ಅಗತ್ಯತೆಗಳಿಗೆ ಸಾಕಷ್ಟು ಹೊಂದಿರುವವನಾಗಿದ್ದಾನೆ ಮತ್ತು ಅಗತ್ಯವಿರುವವರಿಗೆ ಕೊಡುವವನಾಗಿದ್ದಾನೆ. ಇಲ್ಲಿ ಪೌಲನು, ವಿಶ್ವಾಸಿಗಳಿಗೆ ತಮ್ಮ ಸ್ವಂತ ಕೈಗಳಿಂದ ಕೆಲಸ ಮಾಡುವದರ ಪ್ರಾಮುಖ್ಯತೆಯನ್ನು ಕಲಿಸಿಕೊಡುತ್ತಿದ್ದಾನೆ. ಒಳ್ಳೆಯ ಕೆಲಸವನ್ನು ಮಾಡಬೇಕೆಂಬುದಾಗಿ ಅವನು ಅವರಿಗೆ ಉಪದೇಶಿಸಿದನು. ಇದರ ಅರ್ಥ ವಿಶ್ವಾಸಿಗಳು ಅಪ್ರಾಮಾಣಿಕವಾದ ಮತ್ತು ಭ್ರಷ್ಟ ಕೆಲಸಗಳಲ್ಲಿ

ಒಳಗೊಂಡಿರಬಾರದು.

## ನಿಮಗೆ ಯಾವುದೇ ಕೊರತೆಯಾಗದಂತೆ ಕೆಲಸ ಮಾಡಿರಿ

**1 ಥೆಸಲೋನಿಕದವರಿಗೆ 4:11,12**

**[11] ಇದಲ್ಲದೆ ನಾನು ನಿಮಗೆ ಆಜ್ಞೆಕೊಟ್ಟ ಪ್ರಕಾರ ನೀವು ಮತ್ತೊಬ್ಬರ ಕಾರ್ಯದಲ್ಲಿ ತಲೆಹಾಕದೆ ಸುಮ್ಮಗಿದ್ದು ಸ್ವಂತ ಕಾರ್ಯವನ್ನೇ ನಡಿಸಿಕೊಂಡು ಕೈಯಾರೆ ಕೆಲಸಮಾಡುವದೇ ಮಾನವೆಂದೆಣಿಸಿರಿ.**

**[12] ಹೀಗಿದ್ದರೆ ನೀವು ಹೊರಗಿನವರ ಎದುರಿನಲ್ಲಿ ಸಜ್ಜನರಾಗಿ ನಡೆದುಕೊಳ್ಳುವಿರಿ ಮತ್ತು ನಿಮಗೆ ಯಾವದಕ್ಕೂ ಕೊರತೆಯಿರುವದಿಲ್ಲ.**

ರಕ್ಷಣೆ ಹೊಂದದವರು ಅವರ ಮೇಲೆ ಅನುಚಿತ ನಡುವಳಿಕೆಯ ಆಪಾದನೆ ಮಾಡಲು ಅವಕಾಶ ಸಿಗದಂತೆ ತಮ್ಮ ಸ್ವಂತ ಕೈಗಳಲ್ಲಿ ಕೆಲಸ ಮಾಡಬೇಕೆಂಬುದಾಗಿ ಪೌಲನು ವಿಶ್ವಾಸಿಗಳಲ್ಲಿ ಕೇಳಿಕೊಂಡನು. ನಮ್ಮ ಸ್ವಂತ ಕೈಗಳಿಂದ ಕೆಲಸ ಮಾಡುವದು ಯಾವುದಕ್ಕೆ ಕೊರತೆಯಿಲ್ಲದಿರುವದು ಅಥವಾ ನಮ್ಮ ಎಲ್ಲಾ ಅಗತ್ಯತೆ ಪೂರೈಸಲ್ಪಡುವದಕ್ಕೆ ಹೊಂದಿಕೆಯಾಗಿದೆ ಎಂಬುದನ್ನು ಸಹ ಗಮನಿಸಬೇಕು. ಕೆಲವು ಜನರು ತಮ್ಮೆಲ್ಲಾ ಅಗತ್ಯತೆ ಪೂರೈಸುಕೊಳ್ಳುವದಕ್ಕಾಗಿ ಮನೆಯಲ್ಲೇ ಕುಳಿತು "ದೇವರಲ್ಲಿ ಕಾಯುತ್ತಿರುತ್ತಾರೆ." ದೇವರು ನಮ್ಮೆಲ್ಲಾ ಅಗತ್ಯತೆಗಳನ್ನು ಒದಗಿಸುವನು ಎಂದು ವಾಗ್ದಾನ *"ಕ್ರಿಸ್ತ ಯೇಸುವಿನ ಮೂಲಕ ತನ್ನ ಪ್ರಭಾವದ ಐಶ್ವರ್ಯಕ್ಕೆ ತಕ್ಕ ಹಾಗೆ"* (ಫಿಲಿಪ್ಪಿಯವರಿಗೆ 4:19) ಮಾಡಿರುವದು ನಿಜ, ಆದರೆ ತನ್ನ ವಾಕ್ಯಗಳಲ್ಲಿ, ದೇವರು ನಮಗೆ ಕೆಲಸ ಮಾಡಲು ಆಜ್ಞಾಪಿಸಿದ್ದಾನೆ. ಆತನು ನಮ್ಮ ಕೆಲಸವನ್ನು ಕಾಲುವೆಗಳಾಗಿ ಉಪಯೋಗಿಸಿ ಅವುಗಳ ಮೂಲಕ ನಮ್ಮ ಅಗತ್ಯತೆಗಳನ್ನು ಪೂರೈಸುವನು ಎಂದು ಸೂಚಿಸುವದು ಸಹ ನಿಜವಾಗಿದೆ. ದೇವರು ನಮ್ಮ ಅಗತ್ಯತೆಯನ್ನು ನಮ್ಮ ಕೆಲಸದ ಕಾಲುವೆಯ ಮೂಲಕ ಪೂರೈಸುವದು ಕಾಗೆಯು ಹಣದ ಕಂತೆಯನ್ನು ತರುವದು ಅಷ್ಟೇ ಆಲೌಕಿಕವಾಗಿದೆ. ಅದು ಅಷ್ಟು ಪ್ರೇಕ್ಷಣಿಯವಲ್ಲದಿರಬಹುದು, ಆದರೆ ಇದು ಅಲೌಕಿಕವಾಗಿದೆ ಯಾಕೆಂದರೆ ಅದೇ ದೇವರು ನಮಗೆ ಒದಗಿಸುವವನಾಗಿದ್ದಾನೆ. ನಿಮ್ಮ ವೃತ್ತಿಜೀವನದಾದ್ಯಂತ ವೇತನ ಬಡ್ತಿ ಮತ್ತು ಸಂಬಳ ಪಡೆಯುವದು ಒಂದು ಕೆಲಸವನ್ನು ಹೊಂದುವದು ಮತ್ತು ಅದನ್ನು ಕಾಪಾಡಿಕೊಳ್ಳುವದು ಅದು ದೇವರ ಕೃಪೆ ಮತ್ತು ದೈವಿಕ ಒದಗಿಸುವಿಕೆ ನೋಡಿಕೊಳ್ಳುವಂತದ್ದಾಗಿದೆ ಎಂದು ನೆನಪಿನಲ್ಲಿಟ್ಟುಕೊಳ್ಳಿರಿ.

ಕೆಲವು ಜನರು ಅವರು ಪರಿಗಣಿಸುವ ಪ್ರಕಾರ “ಅಲೌಕಿಕ” ವಿಧಾನದ ಮೂಲಕಅಂದರೆಜನರುಅವರಬಳಿಗೆಬಂದುಅವರಕೈಗಳಲ್ಲಿಹಣವನ್ನಿಡುವದು ಅಥವಾ ಇ-ಮೇಲ್ ನಲ್ಲಿ ಚೆಕ್ ಬರುವ ಹಾಗೆ ತಮ್ಮ ಅಗತ್ಯತೆಗಳನ್ನು ದೇವರು ಒದಗಿಸುವನು ಎಂದು ಕಾಯುತ್ತಿದ್ದಾರೆ. ಅವರು ಇದನ್ನು ಕಾಣದಿರುವಾಗ, ದೇವರು ಯಾಕೆ ಒದಗಿಸುತ್ತಿಲ್ಲ ಎಂದು ಆಶ್ಚರ್ಯಪಡುತ್ತಾರೆ. ಕೆಲವೊಂದು ಸಂದರ್ಭಗಳಲ್ಲಿ ಅವರು ಒಂದು ಕೆಲಸವನ್ನು ತೆಗೆದುಕೊಳ್ಳಲು ಮತ್ತು ಸ್ವಲ್ಪ ಸಮಯ ಅದರಲ್ಲಿರಲು ದೇವರು ಕಾಯುತ್ತಿರುತ್ತಾನೆ. ಆ ಕೆಲಸವು ಅವರ ಜೀವನಗಳಿಗೆ ದೇವರ ಒದಿಗುಸುವಿಕೆಯ ಕಾಲುವೆಗಳಾಗಿವೆ.

## ನೀವು ಕೆಲಸ ಮಾಡದಿದ್ದರೆ, ಊಟ ಮಾಡಬೇಡಿರಿ!

**2 ಥೆಸಲೋನಿಕದವರಿಗೆ 3:7-12**

**7 ನೀವು ನಮ್ಮನ್ನು ಅನುಸರಿಸಿ ಹೇಗೆ ನಡೆಯಬೇಕೆಂದು ನೀವೇ ಬಲ್ಲಿರಿ;**

**8 ನಾವು ನಿಮ್ಮಲ್ಲಿ ಅಕ್ರಮವಾಗಿ ನಡೆಯಲಿಲ್ಲ; ನಾವು ಹಣಕೊಡದೆ ಯಾರ ಬಳಿಯಲ್ಲಿಯೂ ಊಟಮಾಡಲಿಲ್ಲ; ನಿಮ್ಮಲ್ಲಿ ಒಬ್ಬರಿಗೂ ಭಾರವಾಗಬಾರದೆಂದು ಹಗಲಿರುಳು ಕಷ್ಟದಿಂದಲೂ ಪ್ರಯಾಸದಿಂದಲೂ ದುಡಿದು ಜೀವನಮಾಡಿಕೊಂಡೆವು.**

**9 ನಿಮ್ಮಿಂದ ಪೋಷಣೆ ಹೊಂದುವದಕ್ಕೆ ನಮಗೆ ಹಕ್ಕಿಲ್ಲವೆಂದು ಹಾಗೆ ಮಾಡಲಿಲ್ಲ, ನೀವು ನಮ್ಮನ್ನು ಅನುಸರಿಸುವದಕ್ಕಾಗಿ ನಿಮಗೆ ಮಾದರಿಯಾಗಿರೋಣವೆಂದೇ ಮಾಡಿದೆವು.**

**10 ಇದಲ್ಲದೆ ನಾವು ನಿಮ್ಮ ಸಂಗಡ ಇದ್ದಾಗ - ಕೆಲಸ ಮಾಡಲೊಲ್ಲದವನು ಊಟಮಾಡಬಾರದೆಂದು ನಿಮಗೆ ಆಜ್ಞಾಪಿಸಿದೆವಷ್ಟೆ.**

**11 ಆದರೆ ನಿಮ್ಮಲ್ಲಿ ಕೆಲವರು ಯಾವ ಕೆಲಸವನ್ನೂ ಮಾಡದೆ ಇತರರ ಕೆಲಸದಲ್ಲಿ ಮಾತ್ರ ತಲೆ ಹಾಕಿ ಅಕ್ರಮವಾಗಿ ನಡೆಯುತ್ತಾರೆಂದು ವರ್ತಮಾನ ಕೇಳಿದ್ದೇವೆ.**

**12 ಇಂಥವರು ತಮ್ಮ ಕೆಲಸವನ್ನು ನೋಡುತ್ತಾ ತಾವೇ ಸಂಪಾದಿಸಿದ್ದನ್ನು ಊಟಮಾಡಬೇಕೆಂದು ಕರ್ತನಾದ ಯೇಸು ಕ್ರಿಸ್ತನಲ್ಲಿ ನಾವು ಆಜ್ಞಾಪಿಸಿ ಪ್ರಬೋಧಿಸುತ್ತೇವೆ.**

ಏನನ್ನೂ ಮಾಡದೆ ಮತ್ತು ಮತ್ತೊಬ್ಬರ ವಿಷಯದಲ್ಲಿ ತಲೆ ಹಾಕಿ, ಅಸ್ತವ್ಯಸ್ತವಾಗಿರುವ ಬದಲು ನಮ್ಮ ಸ್ವಂತ ಆಹಾರವನ್ನು ತಿನ್ನಲು ಮತ್ತು ಶಾಂತವಾಗಿ ಕೆಲಸ ಮಾಡಲು ಹೊಸ ಒಡಂಬಡಿಕೆಯು ನಮಗೆ ಆದೇಶಿಸುತ್ತದೆ. ಕೆಲಸ ವಿಶ್ವಾಸಿಗಳಿಗೆ ಹೊಸ ಒಡಂಬಡಿಕೆಯ ಆಜ್ಞೆಯಾಗಿದೆ.

## ನಿಮ್ಮ ಸ್ವಂತ ಮನೆಗಳಿಗೆ ಒದಗಿಸಿರಿ

**1 ತಿಮೊಥೆಯನಿಗೆ 5:8**

**ಯಾವನಾದರೂ ಸ್ವಂತ ಜನರನ್ನು, ವಿಶೇಷವಾಗಿ ತನ್ನ ಮನೆಯವರನ್ನು ಸಂರಕ್ಷಿಸದೆ ಹೋದರೆ**

**ಅವನು ಕ್ರಿಸ್ತ ನಂಬಿಕೆಯನ್ನು ತಿರಸ್ಕರಿಸಿದವನೂ ನಂಬದವನಿಗಿಂತ ಕಡೆಯಾದವನೂ ಆಗಿದ್ದಾನೆ.**

ಪೂರ್ಣಾವಧಿ ಸೇವೆಗೆ ಕರೆಯಲ್ಪಟ್ಟವರಿಗೆ ನಾನು ಸವಾಲು ಹಾಕಲು ಬಯಸುತ್ತೇನೆ. ಸೇವಕರೆ, ಕೆಲವೊಂದು ಸಂಗತಿಗಳಿವೆ ಅವುಗಳನ್ನು ನೀವು ಮನಸ್ಸಿನಲ್ಲಿಟ್ಟುಕೊಳ್ಳಬೇಕು; ನೀವು ನೆರವೇರಿಸ ತಕ್ಕ ಕೆಲವು ಜವಾಬ್ದಾರಿಕೆಗಳನ್ನು ದೇವರು ತನ್ನ ವಾಕ್ಯಗಳಲ್ಲಿ ನಿಮಗೆ ಕೊಟ್ಟಿದ್ದಾನೆ. ಅದರಲ್ಲೊಂದು ನಿಮ್ಮ ಸ್ವಂತ ಮನೆಗಳಿಗೆ ಒದಗಿಸುವದು. ಬಹಳಷ್ಟು ದೇವರ ಪುರುಷರು ಮತ್ತು ಸ್ತ್ರೀಯರು ಆತುರದಿಂದ ತಮ್ಮ ಕೆಲಸವನ್ನು ಬಿಟ್ಟು ಬಿಟ್ಟು ನಂಬಿಕೆಯಲ್ಲಿ ಜೀವಿಸುತೇವೆ ಎನ್ನುತ್ತಾರೆ. ನಂಬಿಕೆಯಲ್ಲಿ ಜೀವಿಸುವದು ಎಂದರೆ ಕೆಲಸವನ್ನು ಬಿಡಬೇಕೆಂದು ಅರ್ಥವಲ್ಲ. ಆ ಕೆಲಸವನ್ನು ಕಾಯ್ದುಕೊಳ್ಳಲು ನಂಬಿಕೆ ಬೇಕು. ಕೆಲವೊಂದು ಸಮಯಗಳಲ್ಲಿ ಜನರು ತಮ್ಮ ಕೆಲಸಗಳನ್ನು ಬಿಟ್ಟು ಬಿಟ್ಟು ಸೇವೆಗೆ ಹೋಗುತ್ತಾರೆ ಮತ್ತು ನಂತರ ತಮ್ಮ ಸ್ವಂತ ಕುಟುಂಬದ ಸಧಸ್ಯರುಗಳಿಗೆ ಒದಗಿಸಲು ಹೋರಾಡುತ್ತಾರೆ. ನಾನು ಕೆಲವು ಕಷ್ಟದ ಅವಧಿಯ ಬಗ್ಗೆ ಮಾತನಾಡುತ್ತಿಲ್ಲ ಯಾಕೆಂದರೆ ನಾವೆಲ್ಲರೂ ಅದನ್ನು ಹಾದು ಹೋಗುತ್ತೇವೆ. ಹೇಗಿದ್ದರೂ, ನೀವು ಪೂರ್ಣಾವಧಿ ಸೇವೆಯಲ್ಲಿರುವದರಿಂದ ತಿಂಗಳಾದ ಮೇಲೆ ತಿಂಗಳು, ದಿನಗಳಾದ ಮೇಲೆ ದಿನಗಳು ನಿಮ್ಮ ಕುಟುಂಬದ ಮೂಲಭೂತ ಅಗತ್ಯತೆಗಳನ್ನು ನೀವು ಒದಗಿಸದೇ ಹೋದರೆ, ಆಗ ಸೇವೆಯು ನಿಮ್ಮ ಅಗತ್ಯತೆಗಳನ್ನು ಒದಗಿಸುವ ವರೆಗೆ ನೀವು ಒಂದು ಕೆಲಸ ಪಡೆಯುವದನ್ನು ಪರಿಗಣಿಸುವದು ನಿಜವಾಗಲು ಅಗತ್ಯವಿದೆ. ಹಾಗಾಗಿ ನೀವು ಪೂರ್ಣಾವಧಿ ಸೇವೆಗೆ ಕಾಲಿಡುವದಕ್ಕೆ ಮುಂಚೆ, ನಿಮ್ಮ ಆರ್ಥಿಕ ಅಗತ್ಯತೆ ಮತ್ತು ನಿಮ್ಮ ಕೌಟುಂಬಿಕ ಅಗತ್ಯತೆಗಳನ್ನು ನೀವು ನೋಡಿಕೊಳ್ಳುವಿರಿ ಎಂಬುದನ್ನು ಖಚಿತಪಡಿಸಿಕೊಳ್ಳಿರಿ. ನಿಮ್ಮ ಹೆಂಡತಿ ಮತ್ತು ಮಕ್ಕಳನ್ನು ನೋಡಿಕೊಳ್ಳಲು ನೀವು ಸಿದ್ಧರಾಗಿರದಿದ್ದರೆ ಮದುವೆ ಆಗಬೇಡಿ. ನಿಮ್ಮ ಮನೆಗಳಿಗೆ ನೀವು ಜವಾಬ್ದಾರಿಯುತರಾಗಿರುವದು ಇದು ದೇವರ ಬಯಕೆಯಾಗಿದೆ.

## ನನ್ನ ಸಾಕ್ಷಿ

ಬೆಂಗಳೂರಿನಲ್ಲಿ ನನ್ನ ಶಾಲೆಯ ಆರಂಭಿಕ ದಿನಗಳಲ್ಲಿ, ನಾನು ಸೇವೆಗಾಗಿ ಬಹಳ ವೈರಾಗ್ಯವುಳ್ಳವನಾಗಿದ್ದೆ. ನಾನು ಹತ್ತನೆ ತರಗತಿ ಮುಗಿಸಿದೊಡನೆ ಪೂರ್ಣಾವಧಿ ಸೇವೆಗೆ ಹೋಗಬೇಕೆಂಬದಾಗಿ ಪ್ರಾರ್ಥಿಸುತ್ತಿದ್ದೆ. ಇದನ್ನು

ಮಾಡಿದ ಮೇಲೆ ನಾನು ಲೌಕಿಕ ವಿಧ್ಯಾಭ್ಯಾಸ ಮುಂದುವರಿಸುವದಿಲ್ಲ ನಾನು ಸತ್ಯವೇದ ಕಾಲೇಜಿಗೆ ಹೋಗುತ್ತೇನೆ ಎಂದು ಒತ್ತಾಯ ಮಾಡುತ್ತಾ ನನ್ನ ಪೋಷಕರಿಗೆ ಕಷ್ಟಕಾಲ ಕೊಟ್ಟೆನು. ಹಾಗಾಗಿ, ಭಾರತದಲ್ಲಿರುವ ಸತ್ಯವೇದ ಕಾಲೇಜುಗಳನ್ನು ಹುಡುಕಿದೆನು ಮತ್ತು ಪುಣೆಯಲ್ಲಿರುವ ಸತ್ಯವೇದ ಕಾಲೇಜಿಗೆ ಒಂದು ಪತ್ರವನ್ನು ಕಳುಹಿಸಿದೆನು. ಆ ಕಾಲೇಜು ನನಗೆ ಒಂದು ಪತ್ರ ಕಳುಹಿಸಿ ನಾನು ಸತ್ಯವೇದ ಕಾಲೇಜು ಸೇರಲು ಇನ್ನೂ ಚಿಕ್ಕವನು ಅದಕ್ಕೆ ಕನಿಷ್ಟ ಅರ್ಹತೆ 12ನೇ ತರಗತಿ ಆಗಿರಬೇಕು ಎಂದು ಹೇಳಿದರು. ನಾನು ಪಡೆದ ಆ ಪತ್ರ ನನ್ನನ್ನು ನಿರುತ್ಸಾಹ ಮಾಡಿತು. ಹೇಗಿದ್ದರೂ, ಇನ್ನೂ ಎರಡು ವರ್ಷದ ಲೌಕಿಕ ವಿಧ್ಯಾಭ್ಯಾಸವಾಗಿದ್ದ ಕಾರಣದಿಂದ, ನನ್ನ ವಿಧ್ಯಾರ್ಹತೆಯನ್ನು ಪೂರ್ಣಗೊಳಿಸದ ನಂತರ ಸತ್ಯವೇದ ಕಾಲೇಜು ಸೇರಬೇಕೆಂದು ನಿರ್ಧರಿಸಿದೆ.

ಹೇಗಿದ್ದರೂ, ಮುಂದಿನ ಎರಡು ವರ್ಷಗಳು, ಏನೋ ನನಗೆ ಸಂಭವಿಸಿತು. ನಾನು ಬೆಂಗಳೂರಿನಲ್ಲಿ ಒಂದು ನಿರ್ಧಿಷ್ಟವಾದ ಸಭೆಯಲ್ಲಿ ಪಾಲ್ಗೊಳ್ಳುತ್ತಿದ್ದೆ ಮತ್ತು ನಾನು ಅಲ್ಲಿ ಏನೋ ಒಂದು ಸಂಗತಿಯನ್ನು ಗಮನಿಸಿದೆ. ನಾನು ಎರಡು ಜನರ ಗುಂಪನ್ನು ನೋಡಿದೆ—ಒಂದು ಗುಂಪಿನ ಜನರು ಸೇವೆ ಮಾಡುತ್ತಿದ್ದರು ಮತ್ತು ಸಭೆಯಲ್ಲಿ ಇನ್ನೂ ಅನೇಕ ವಿಧಗಳಲ್ಲಿ ಸೇವೆ ಸಲ್ಲಿಸುತ್ತಿದ್ದರು, ಮತ್ತೊಂದು ಗುಂಪು, ಒಂದು ದೊಡ್ಡ ಬಹುಪಾಲು ಅವರು ಸಭೆಯಲ್ಲಿ ಹಾಜರಿರುತ್ತಿದ್ದರು ಆದರೆ ಏನೂ ಮಾಡುತ್ತಿರಲಿಲ್ಲ. ಬಹುತೇಕ ಎರಡನೇ ಗುಂಪಿನ ಜನರು ವಿಧ್ಯಾರ್ಥಿಗಳು ಮತ್ತು ಉದ್ಯೋಗಸ್ಥರಾಗಿದ್ದರು ಅವರು ಯಾವುದೇ ವಿಧವಾದ ಸೇವೆಗೆ ನೆಪಗಳನ್ನು ಹೇಳುತ್ತಿದ್ದರು ಯಾಕೆಂದರೆ ಅವರು ತಮ್ಮ ಕೆಲಸಗಳಲ್ಲಿ ಬಹಳ ಕಾರ್ಯಮಗ್ನರು ಎಂದು ತಮ್ಮನ್ನು ಪರಿಗಣಿಸಿಕೊಂಡಿದ್ದರು. ಯಾಕೆ ಬಹುತೇಕ “ಶ್ರೀಸಾಮಾನ್ಯರು” ಎಂದಿಗೂ ಸೇವೆಯಲ್ಲಿ ತೊಡಗಸಿಕೊಂಡಿಲ್ಲ ಎಂದು ಆಶ್ಚರ್ಯಕ್ಕೆ ಒಳಗಾದೆನು. ಈ ಸಮಯದಲ್ಲಿ ನನ್ನ ಹೃದಯವನ್ನು ಒಂದು ದೃಢನಿರ್ಧಾರದ ಭಾವನೆಯು ಹಿಡಿದುಕೊಂಡಿತು. ನನ್ನ ಜೀವಿತದ ಮೂಲಕ ಒಬ್ಬರು ವೃತ್ತಿಜೀವನ, ಒಂದು ಉದ್ಯೋಗ, “ಒಂದು ಸಾಮಾನ್ಯವಾದ ಜೀವನವನ್ನು ಜೀವಿಸುತ್ತ” ಇನ್ನೂ ದೇವರ ಸೇವೆಯನ್ನು ಮಾಡಬಹುದೆಂದು ಜನರಿಗೆ ಪ್ರದರ್ಶಿಸಬೇಕೆಂದು ನಾನು ದೃಢಸಂಕಲ್ಪಿತನಾದೆನು. ಹೀಗೆ ನಾನು 12ನೇ ತರಗತಿ ಮುಗಿಸುವಷ್ಟರಲ್ಲಿ ಸತ್ಯವೇದ ಕಾಲೇಜಿಗೆ ಹೋಗಬೇಕೆಂಬ ಎಲ್ಲಾ ಆಶೆಯನ್ನು ನಾನು ಕಳೆದುಕೊಂಡೆ. ಬದಲಾಗಿ ನನ್ನ ಜೀವಿತದಲ್ಲಿ ಏನು ಮಾಡಬೇಕೆಂಬ ಒಂದು ಹೊಸ ಉದ್ದೇಶದ ಮನೋಭಾವವನ್ನು

ಹೊಂದಿಕೊಂಡೆ.

ಈ ಸಮಯದಲ್ಲಿ, ಬೆಂಗಳೂರು ಪಟ್ಟಣದಲ್ಲಿ ಒಂದು ಬಲವಾದ ಸಭೆಯನ್ನು ಸ್ಥಾಪಿಸಬೇಕು ಮತ್ತು ಅಲ್ಲಿಂದ ಭಾರತ ದೇಶವನ್ನು ತಲುಪಬೇಕು ಮತ್ತು ಪ್ರಪಂಚದ ರಾಷ್ಟ್ರಗಳನ್ನು ಪ್ರಭಾವಗೊಳಿಸಬೇಕೆಂಬ ಬಯಕೆಯನ್ನು ದೇವರು ನನ್ನ ಹೃದಯದಲ್ಲಿ ಹಾಕಿದನು. ಹಾಗಾಗಿ, ನನ್ನ ಶಾಲೆಯಲ್ಲಿ 12ನೇ ತರಗತಿಯನ್ನು ಮುಗಿಸಿದೆನು ಮತ್ತು ನಂತರ ನನ್ನ ಪೋಷಕರು ನನ್ನನ್ನು ಮಣಿಪಾಲಿನಲ್ಲಿರುವ ಇಂಜಿನೀರಿಂಗ್ ಕಾಲೇಜಿಗೆ ಕಳುಹಿಸಿದರು. ಅಷ್ಟರಲ್ಲಿ, ನನ್ನ ಅಧ್ಯಯನಗಳನ್ನು ಒಂದು ಭಾರವಾಗಿ ನೋಡುವದನ್ನು ನಿಲ್ಲಿಸಿದೆನು ಮತ್ತು ನನ್ನ ವಿಧ್ಯಾಭ್ಯಾಸವು ದೈವಿಕ ಕಾರ್ಯತಂತ್ರದ ಒಂದು ಭಾಗವಾಗಿದೆ ಎಂದು ಅರ್ಥಮಾಡಿಕೊಂಡೆನು. ನನ್ನ ವಿಧ್ಯಾಭ್ಯಾಸವನ್ನು ಮುಂದುವರಿಸಿದ ಕಾರಣದಿಂದ ದೇವರ ರಾಜ್ಯಕ್ಕಾಗಿ ಇನ್ನೂ ಅನೇಕ ಜನರನ್ನು ತಲುಪುವ ಸ್ಥಳದಲ್ಲಿ ನನ್ನನ್ನು ಕಂಡುಕೊಂಡೆನು.

ಮಣಿಪಾಲ್ ವಿಶ್ವವಿಧ್ಯಾನಿಲಯದ ಆವರಣದಲ್ಲಿ, ನಾನು ಭಾರತದ ಎಲ್ಲಾ ಭಾಗಗಳಿಂದ ಮತ್ತು ಪ್ರಪಂಚದ ಇತರ ಭಾಗಗಳಿಂದ ವಿದ್ಯಾರ್ಥಿಗಳನ್ನು ಕಂಡೆನು. ನಾನು ಅಲ್ಲಿ ವಿದ್ಯಾಭ್ಯಾಸ ಮಾಡಿದರ ಹಿಂದೆ ಒಂದು ಆತ್ಮಿಕ ಉದ್ದೇಶವಿತ್ತು ಎಂದು ನಾನು ನಂಬಿದೆನು.

ಅಲ್ಲಿಯೇ ದೇವರ ಸೇವೆ ಮಾಡುವ ಮತ್ತು ಆತ್ಮಗಳನ್ನು ಗೆಲ್ಲಲು ನನ್ನ ಹೃದಯ ಆಶಿಸಿತು. ಜನವರಿ 1989 ರಲ್ಲಿ, ನನ್ನ ಇಂಜಿನೀರಿಂಗ್ ಕಾಲೇಜಿನ ಮೂರನೇ ವರ್ಷದಲ್ಲಿ, ದೇವರು ವಿದ್ಯಾರ್ಥಿಗಳ ಅನ್ಯೋನತೆ ಕೂಟವನ್ನು ಸ್ಥಾಪಿಸಲು ಶ್ರಮಿಸಲಿಕ್ಕೆ ಸಹಾಯ ಮಾಡಿದನು ಅದು ನಂತರ ಒಂದು ಸ್ಥಳಿಯ ಸಭೆಯಾಗಿ ಬೆಳೆಯಿತು ಮತ್ತು ಇಂದಿಗೂ ಸಹ ಅದು ಮುಂದುವರಿಯುತ್ತಿದೆ. ನಾನು ಇನ್ನು ಎಷ್ಟು ಮಾತ್ರಕ್ಕೂ ನನ್ನ ವಿದ್ಯಾಭ್ಯಾಸವನ್ನು ಭಾರವಾಗಿ, ಒಂದು ಅನಿವಾರ್ಯದ ದುಷ್ಟತೆಯಾಗಿ ಅಥವಾ ಒಂದು ಬಂಧನವಾಗಿ ಕಾಣಲಿಲ್ಲ. ಭವಿಷ್ಯತ್ತಿನ ಸೇವೆಗೆ ಅದು ಒಂದು ವಾಹನ, ಒಂದು ದೈವಿಕ ಕಾರ್ಯತಂತ್ರ, ಮತ್ತು ಒಂದು ಸಿದ್ಧತೆಯ ಪ್ರಕ್ರಿಯೆಯೆಂದು ನಾನು ಅರ್ಥ ಮಾಡಿಕೊಂಡೆ. ಇಂಜಿನೀರಿಂಗ್ ನಲ್ಲಿ ಸ್ನಾತಕೋತ್ತರ ಪದವಿ ಪೂರ್ಣಗೊಳಿಸಿದ ನಂತರ ನಾನು ನನ್ನ ವಿದ್ಯಾಭ್ಯಾಸವನ್ನು ಮುಂದುವರೆಸಲು ನಿರ್ಧರಿಸಿದೆ. ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ನನ್ನ ಪೋಷಕರು ಅಮೇರಿಕಾ ದೇಶಕ್ಕೆ ಹೋಗಲು ನನಗೆ

ಸಹಾಯ ಮಾಡಿದರು. ಅಮೇರಿಕಾ ದೇಶದ ಅಗ್ರ ಮೂರು ಕಾಲೇಜುಗಳಲ್ಲಿ ಒಂದಾದ ಒಹಿಯೋದ, ಕ್ಲಿವ್ ಲ್ಯಾಂಡ್ ನಲ್ಲಿರುವ ವಿಶ್ವವಿದ್ಯಾಲಯದ ಇಂಜಿನೀರಿಂಗ್ ಶಾಖೆಯಲ್ಲಿ ನನಗೆ ದಾಖಲಾತಿ ಪಡೆದುಕೊಂಡೆ. ದೇವರ ಕೃಪೆಯಿಂದ ನನ್ನ ಎರಡನೇ ಸೆಮಿಸ್ಟರ್ ನಲ್ಲಿ ಮೂರನೇ ಎರಡು ಭಾಗದಷ್ಟು ಹಣ ಸಹಾಯ ಪಡೆದುಕೊಂಡೆ ಮತ್ತು ಮೂರನೇ ಸೆಮಿಸ್ಟರ್ ಮೊದಲುಗೊಂಡು ಸಂಪೂರ್ಣ ಸಹಾಯ ಪಡೆದುಕೊಂಡೆ.

ವಿಶ್ವವಿದ್ಯಾಲಯದಲ್ಲಿ ಅಧ್ಯಯನ ಮತ್ತು ಸಂಶೋಧನೆ ಮಾಡುತ್ತಿರುವಾಗ, ನನಗೆ ಒಂದು ಸಣ್ಣ ಅಂತರಾಷ್ಟ್ರೀಯ ವಿದ್ಯಾರ್ಥಿಗಳ ಅನ್ಯೋನತೆಯನ್ನು ಪ್ರಾರಂಭಿಸುವದಕ್ಕೆ ಸಾಧ್ಯವಾಯಿತು ಅಲ್ಲಿ ನಮಗೆ ಭಾರತ, ಇಂಡೋನೇಷ್ಯಾ ಮತ್ತು ಮಲೇಷ್ಯಾದಿಂದ ವಿದ್ಯಾರ್ಥಿಗಳಿದ್ದರು. ನಂತರ ನಾನು ನ್ಯೂ ಜೆರ್ಸಿಗೆ ತೆರಳಿದೆ, ಅಲ್ಲಿ ಸುಮಾರು 200 ವಿದ್ಯಾರ್ಥಿಗಳನ್ನು ಒಳಗೊಂಡ ಕೊರಿಯನ್ ಅನ್ಯೋನತೆಯಲ್ಲಿ ಭಾಗಿಯಾದೆ. ಈ ಕೊರಿಯಾದ ವಿದ್ಯಾರ್ಥಿಗಳು ಎಷ್ಟು ತೀವ್ರತೆಯಿಂದ ಪ್ರಾರ್ಥಿಸದರು ಎಂಬುದನ್ನು ನೋಡುಲು ಆಶ್ಚರ್ಯವಾಯಿತು.

ಈ ಸಮಯದಲ್ಲಿ ನಾನು ವಿಶ್ವವಿದ್ಯಾಲಯದ ಆವರಣಕ್ಕೆ ಹತ್ತಿರವಿದ್ದ ಆಫ್ರಿಕನ್-ಅಮೇರಿಕನ್ ಸಭೆಯಲ್ಲಿ ನಿಯಮಿತವಾಗಿ ಸೇವೆ ಸಲ್ಲಿಸುತ್ತಿದ್ದೆ. ಒಂದು ವರ್ಷಕ್ಕೂ ಹೆಚ್ಚ ಕಾಲ ಪ್ರತಿ ಬುಧವಾರ ರಾತ್ರಿ ಈ ಆಫ್ರಿಕನ್-ಅಮೇರಿಕನ್ ಸಭೆಯಲ್ಲಿ ನಾನು ಬೋಧಿಸಿದೆ ಮತ್ತು ಕಾಲಕಾಲಕ್ಕೆ ಅವರ ಭಾನುವಾರದ ಆರಾಧನೆಯಲ್ಲಿ ಮತ್ತು ಡೇರೆ ಕೂಟಗಳಲ್ಲಿ ಸಹ ಪ್ರಸಂಗಿಸಿದೆನು.

ನಾನು ಎಮಿಯವರನ್ನು ಮದುವೆಯಾದ ಮೇಲೆ ಭಾರತದಿಂದ ನನ್ನನ್ನು ಸೇರಿಕೊಂಡಳು, ನಾನು ವಿಶ್ವವಿದ್ಯಾಲಯವನ್ನು ಬಿಟ್ಟೆನು ಮತ್ತು ಸಾಫ್ಟ್ ವೇರ್ ವೃತ್ತಿಪರನಾಗಿ ಕೆಲಸ ಮಾಡಲು ಪ್ರಾರಂಭಿಸಿದೆ. ಈ ಸಮಯದಲ್ಲಿ, ಎಮಿ ಮತ್ತು ನಾನು ಮತ್ತೊಂದು ಯುವ ಹಿಸ್ಪಾನಿಕ್ ದಂಪತಿಗಳೊಂದಿಗೆ ಒಟ್ಟಿಗೆ ಕೆಲಸ ಮಾಡಿದೆವು ಮತ್ತು ನ್ಯೂ ಜೆರ್ಸಿಯ, ನ್ಯೂ ಬ್ರನ್ಸ್ ವಿಕ್ನಲ್ಲಿ ಹಿಸ್ಪಾನಿಕ್ ಸಭೆಯನ್ನು ಸ್ಥಾಪಿಸಿದೆವು. ವಿಭಿನ್ನ ಹಿನ್ನೆಲೆಯ ಜನರೊಂದಿಗೆ ದಾಟು-ಸಾಂಸ್ಕೃತಿಕವಾಗಿ ಮಾಡಿದ ಕೆಲಸದ ಅನುಭವವು ಬಹಳ ಉತ್ಕೃಷ್ಟವಾಗಿತ್ತು. ನಾನು ಅಮೇರಿಕಕ್ಕೆ ಪದವಿದರ ಅಧ್ಯಯನವನ್ನು ಮುಂದುವರೆಸಲು ಹೋದದ್ದರಿಂದ ಭವಿಷ್ಯತ್ತಿನ ಸೇವೆ ಸಾಧ್ಯವಾಗುವದಕ್ಕೆ ಇದು ಒಂದು ದೊಡ್ಡ ತರಬೇತಿ ಮೈದಾನವಾಗಿತ್ತು.

1998 ರಲ್ಲಿ ನ್ಯೂ ಜೆರ್ಸಿಯಿಂದ, ಚಿಕಾಗೋ ಗೆ ತೆರಳಿದೆವು. 1999ರಲ್ಲಿ ಭಾರತದಲ್ಲಿ ಒಂದು ಸೇವಾ ಯಾತ್ರೆಯ ಸಮಯದಲ್ಲಿ, ನಾವು ಭಾರತಕ್ಕೆ ಹಿಂತಿರುಗುವ ಸಮಯವಾಗಿದೆ ಮತ್ತು ನಮ್ಮ ಹೃದಯದಲ್ಲಿರುವ ದರ್ಶನವನ್ನು ಸಾಧಿಸುವ ಸಮಯವಾಗಿದೆ ಎಂದು ನನಗೆ ಅನ್ನಿಸಿತು. ಹಾಗಾಗಿ 2001 ಜನವರಿ ತಿಂಗಳಲ್ಲಿ ಬೆಂಗಳೂರಿಗೆ ಹಿಂತಿರುಗಬೇಕೆಂದು ಗುರುತು ಮಾಡಿಕೊಂಡೆವು. ಚಿಕಾಗೋದಿಂದ ಬೆಂಗಳೂರಿಗೆ ಸ್ಥಳಾಂತರಗೊಳ್ಳುವದಕ್ಕೆ ಸಿದ್ಧತೆಗಳನ್ನು ಆರಂಭಿಸಿದಾಗ, ಭಾರತದಲ್ಲಿ ನಮ್ಮ ಸೇವೆಯನ್ನು ಪ್ರಾರಂಭಿಸುವದಕ್ಕೆ ಮಾರ್ಗವನ್ನು ಕಂಡುಕೊಳ್ಳುವದು ನಮ್ಮ ಕಳವಳಗಳಲ್ಲಿ ಒಂದಾಗಿತ್ತು. ಚಿಕಾಗೋದಲ್ಲಿ ನಾವು ಒಂದು ಸಣ್ಣ ಸಭೆಯ ಭಾಗವಾಗಿದ್ದೆವು. ನಮಗಿದ್ದ ದೊಡ್ಡ ದರ್ಶನವನ್ನು ನೆರವೇರಿಸಲು ದೊಡ್ಡ ಹಣದ ಮೊತ್ತವನ್ನು ನಮಗೆ ಕೊಡಲು ಅವರಿಗೆ ಸಾಧ್ಯವಾಗುತ್ತರಲಿಲ್ಲ. ನಾನು ಎಡಬಿಡದೆ ಕರ್ತನನ್ನು ಹುಡುಕುತ್ತಿರುವಾಗ, ನಾನು ಹಿಂದಿರುಗಿದ ಮೇಲೆ ಸಹ ಎಡಬಿಡದೆ ನನ್ನ ಸಾಫ್ಟ್ ವೇರ್ ಕ್ಷೇತ್ರದಲ್ಲಿ ಕೆಲಸ ಮಾಡಬೇಕೆಂದು ದೇವರು ಬಯಸುತ್ತಿದ್ದಾನೆ ಎಂದು ನನ್ನ ಹೃದಯದಲ್ಲಿ ಸ್ಪಷ್ಟವಾಗಿ ನನಗೆ ಅನ್ನಿಸಿತು. ನನ್ನ ವೃತ್ತಿ ಜೀವನವನ್ನು ನಿಲ್ಲಿಸುವ ಯಾವ ಮಾರ್ಗದರ್ಶನವನ್ನು ನಾನು ದೇವರಿಂದ ಹೊಂದಲಿಲ್ಲ. ಅನೇಕ ವರ್ಷಗಳಿಂದ, ವಿಶೇಷವಾಗಿ ಅಮೇರಿಕದಲ್ಲಿ ವಾಸವಾಗಿದ್ದ ಕೊನೆಯ ದಿನಗಳಲ್ಲಿ, ನನಗೆ ಕ್ರೈಸ್ತಿಯ ತತ್ವಗಳ ಆಧಾರ ಮೇಲೆ ವ್ಯವಹಾರಗಳನ್ನು ನಡಿಸಿಕೊಂಡು ಹೋಗುವ ಮತ್ತು ದೇವರ ರಾಜ್ಯಕ್ಕೆ ಹಣವನ್ನು ತರುವ ಒಂದು ಕಂಪನಿಯನ್ನು ಪ್ರಾರಂಭಿಸಬೇಕೆನ್ನುವ ಬಲವಾದ ಬಯಕೆ ನನ್ನಲ್ಲಿ ಉಂಟಾಯಿತು. ನನ್ನ ಹೃದಯದಲ್ಲಿ ಬಹು ಕಾಲದಿಂದ ಈ ಬಯಕೆಯು ಬೆಳೆಯುತ್ತಾ ಇತ್ತು. ಆದರೆ ಹೇಗೆ ಮತ್ತು ಎಲ್ಲಿ ಇದನ್ನು ಮಾಡಬೇಕೆಂಬುದು ನನಗೆ ಗೊತ್ತಿರಲಿಲ್ಲ.

ಕೊನೆಯದಾಗಿ, ನಾವು ಭಾರತಕ್ಕೆ ತೆರಳುವ ಸಮಯವಾಗಿತ್ತು. 2000 ದ ಡಿಸಂಬರ್ ನಲ್ಲಿ ನಾವು ರಾಷ್ಟ್ರವನ್ನು ತಲುಪುವ ದೊಡ್ಡ ದರ್ಶನದೊಂದಿಗೆ ಅಮೇರಿಕಾವನ್ನು ನಾವು ಬಿಟ್ಟು ತೆರಳಿದೆವು ಆದರೆ ನಾವು ಸೇವೆಯನ್ನು ನಡಿಸಿಕೊಂಡು ಹೋಗಲಿಕ್ಕೆ ಅಗತ್ಯವಿರುವ ಎಲ್ಲಾ ಹಣಕಾಸು ಹೇಗೆ ಹೊಂದಲಿಕ್ಕಿದ್ದೇವೆ ಎಂಬ ಯಾವುದೇ ಕಲ್ಪನೆ ನಮಗಿರಲಿಲ್ಲ. ಅಮೇರಿಕಾದಲ್ಲಿ ನಮ್ಮ ಬೆಂಬಲಿಸುವ ಕೆಲವು ಸ್ನೇಹಿತರೊಂದಿಗೆ ನಮ್ಮ ಸೇವೆಯನ್ನು ಸಂಯೋಜಿಸಿದ್ದೇವು, ಆದರೆ ನಮಗಿದ್ದ ದೊಡ್ಡ ದರ್ಶನವನ್ನು ಸಾಕರಗೊಳಿಸಲು

ನಾವು ಪಡೆಯುತ್ತಿದ್ದ ದೇಣಿಗೆ ಸಾಲುತ್ತಿರಲಿಲ್ಲ!

ನಾವು ಬೆಂಗಳೂರಿಗೆ ಬಂದ ಮೇಲೆ, 2001 ರಲ್ಲಿ ಸಾಫ್ಟ್ ವೇರ್ ಸೌಲಭ್ಯವನ್ನು ಒದಗಿಸುವ ಕಂಪನಿಯನ್ನು ಪ್ರಾರಂಭಿಸಲು ದೇವರು ನಮಗೆ ಕೃಪೆಯಿಂದ ಶಕ್ತಿಕರಿಸಿದನು. ಫೆಬ್ರವರಿ 2001 ರಲ್ಲಿ ಸಣ್ಣದಾದ ರೀತಿಯಲ್ಲಿ– ನಮ್ಮ ಸಭೆಯನ್ನು ನಮ್ಮ ತಂದೆಯವರ ಮನೆಯ ಕೂರುವ ಕೋಣೆಯಿಂದ ಅದನ್ನು ಪ್ರಾರಂಭಿಸಿದೆವು. ಸಾಫ್ಟ್ ವೇರ್ ಕಂಪನಿ ದಶಮಾಂಶವನ್ನು ಸಭೆಗೆ ನೀಡಿತು ಮತ್ತು ಈ ಹಣದಿಂದ ಬಹಳಷ್ಟು ಮಾಡಲು ಸಾಧ್ಯವಾಯಿತು– ಬಾಡಿಗೆ ಭವನಕ್ಕೆ ಹೋಗಲು, ನಮಗೆ ಅಗತ್ಯವಿದ್ದ ಉಪಕರಣಗಳನ್ನು ಖರೀದಿಸಲು, ಪುಸ್ತಕಗಳನ್ನು ಮುದ್ರಿಸಲು ಮತ್ತು ಅವುಗಳನ್ನು ಉಚಿತವಾಗಿ ವಿತರಿಸಲು, ಕೇಬಲ್ ಟಿವಿಯಲ್ಲಿ ಬರಲು ಮತ್ತು ಇತರ ಸೇವೆಗಳನ್ನು ಬೆಂಬಲಿಸಲು ಆಯಿತು. ನಮಗೆ ದೊಡ್ಡ ದರ್ಶನವಿತ್ತು ಮತ್ತು ನಮ್ಮ ಕೈಗಳು ಹಣದ ಕೊರತೆಯಿಂದ ಕಟ್ಟಲ್ಪಡಲಿಲ್ಲ. ನಮ್ಮ ಬಳಿ ಸಾಕಷ್ಟು ಇತ್ತು ಮತ್ತು ಸಂಗತಿಗಳನ್ನು ಪ್ರಾರಂಭಿಸಲು ಹೆಚ್ಚು ಸಂಪನ್ಮೂಲಗಳು ಇತ್ತು.

ಹಿಂತಿರುಗಿ ನೋಡುವಾಗ, ಸೇವೆಗಾಗಿ ನನ್ನನ್ನು ಸೇವೆಗಾಗಿ ಸಿದ್ಧ ಮಾಡುವದಕ್ಕಾಗಿ ದೇವರು ಹೇಗೆ ನನ್ನ ವಿದ್ಯಾಭ್ಯಾಸವನ್ನು ಮತ್ತು ಉದ್ಯೋಗವನ್ನು ಉಪಯೋಗಿಸಿದನು ಎಂದು ನೋಡುವವನಾಗಿದ್ದೇನೆ. ಕರ್ತನ ಕೆಲಸವನ್ನು ನಡೆಸಿಕೊಂಡು ಹೋಗಲು ನನ್ನ ವಿದ್ಯಾಭ್ಯಾಸ ಮತ್ತು ಉದ್ಯೋಗದೊಂದಿಗೆ ಅವಕಾಶಗಳು ಬಿಗಿಯಾಗಿ ಸಂಯೋಜಿಸಲ್ಪಟ್ಟಿತ್ತು. ದೇವರ ಉದ್ದೇಶ ಮತ್ತು ಚಿತ್ತವನ್ನು ನಡೆಸಲು ಕೆಲಸವು ಒಂದು ದೈವಿಕ ಕಾರ್ಯತಂತ್ರದ ಭಾಗವಾಗಿದೆ ಮತ್ತು ಒಂದು ವಾಹನವಾಗಿದೆ ಎಂದು ನನಗೆ ಹೆಚ್ಚು ಮನವರಿಕೆಯಾಗಿದೆ.

ದೇವರು ಮಾಡಲು ಬಯಸುವದನ್ನು ನೀವು ಮಾಡುವಾಗ, ನಿಮ್ಮ ಕೆಲಸವು ಒಂದು ಅಡತಡೆ, ಒಂದು ಬಂಧನ, ಅಥವಾ ಒಂದು ಅನಿವಾರ್ಯದ ದುಷ್ಟತೆಯಾಗುವದಿಲ್ಲ. ಒಂದು ವೇಳೆ ದೇವರು ನಿಮ್ಮನ್ನು ಕೆಲಸ ಮಾಡುವದಕ್ಕೆ ಕರೆಯುವಾಗ ಕೆಲಸವನ್ನು ಒಂದು ಅನಿವಾರ್ಯದ ದುಷ್ಟತೆಯಾಗಿ, ಬಂಧನವಾಗಿ ಅಥವಾ ಅಡೆತಡೆಯಾಗಿ ಪರಿಗಣಿಸಬೇಡಿರಿ. ಇಲ್ಲಿ ಭೂಮಿಯ ಮೇಲೆ ದೇವರ ರಾಜ್ಯವನ್ನು ವಿಸ್ತರಿಸುವದಕ್ಕೆ ನಿಮ್ಮ ಜೀವಿತಕ್ಕೆ ದೈವಿಕ ಕಾರ್ಯತಂತ್ರದ ಒಂದು ಭಾಗವೆಂದು ನೋಡಲು ಪ್ರಾರಂಭಿಸಿರಿ.

# 5

# ಏಳು ಸರಿಯಾದ ಮನೋಭಾವಗಳು

**ಎಫೆಸದವರಿಗೆ 6:5-10**

[5] ದಾಸತ್ವದಲ್ಲಿರುವವರೇ (ಉದ್ಯೋಗಿ), ಈ ಲೋಕದಲ್ಲಿ ನಿಮಗೆ ಯಜಮಾನರಾಗಿರುವವರಿಗೆ (ಉದ್ಯೋಗದಾತರು) ಕ್ರಿಸ್ತನಿಗೆಂದು ಮನೋಭೀತಿಯಿಂದ ನಡುಗುವವರಾಗಿಯೂ ಸರಳಹೃದಯರಾಗಿಯೂ ವಿಧೇಯರಾಗಿರ್ರಿ.

[6]ಮನುಷ್ಯರನ್ನು ಮೆಚ್ಚಿಸುವವರು ಮಾಡುವ ಪ್ರಕಾರ ಯಜಮಾನರು ನೋಡುತ್ತಿರುವಾಗ ಮಾತ್ರ ಸೇವೆಮಾಡದೆ ಕ್ರಿಸ್ತನ ದಾಸರಿಗೆ (ಉದ್ಯೋಗಿ), ತಕ್ಕ ಹಾಗೆ ದೇವರ ಚಿತ್ತವನ್ನು ಮನಃಪೂರ್ವಕವಾಗಿ ನಡಿಸಿರಿ.

[7] ಮನುಷ್ಯರಿಗೋಸ್ಕರವಲ್ಲ, ಕರ್ತನಿಗೋಸ್ಕರ ಸೇವೆಮಾಡುತ್ತೇವೆಂದು ಚಿತ್ತಪೂರ್ವಕವಾಗಿ ಸೇವೆಮಾಡಿರಿ.

[8] ಯಾಕಂದರೆ ಒಬ್ಬನು ದಾಸನಾಗಲಿ ಸ್ವತಂತ್ರನಾಗಲಿ ತಾನು ಯಾವ ಸತ್ಕಾರ್ಯವನ್ನು ಮಾಡುತ್ತಾನೋ ಅದರ ಪ್ರತಿಫಲವನ್ನು ಕರ್ತನಿಂದ ಹೊಂದುವನೆಂಬದನ್ನು ನೀವು ತಿಳಿದವರಾಗಿಯೇ ಇದ್ದೀರಿ.

[9] ಯಜಮಾನರೇ (ಉದ್ಯೋಗದಾತರು), ನಿಮ್ಮ ಕೈಕೆಳಗಿರುವ ದಾಸರ ವಿಷಯದಲ್ಲಿ ಅದೇ ರೀತಿಯಾಗಿ ನಡೆಯಿರಿ. ಪರಲೋಕದಲ್ಲಿ ನಿಮಗೂ ಅವರಿಗೂ ಯಜಮಾನನಾಗಿರುವಾತನು(ಉದ್ಯೋಗದಾತರು) ಇದ್ದಾನೆಂತಲೂ ಆತನಲ್ಲಿ ಪಕ್ಷಪಾತವಿಲ್ಲವೆಂತಲೂ ತಿಳಿದು ನಿಮ್ಮ ದಾಸರನ್ನು ಬೆದರಿಸುವ ಪದ್ಧತಿಯನ್ನು ಬಿಟ್ಟುಬಿಡಿರಿ.

[10] ಕಡೇ ಮಾತೇನಂದರೆ, ನೀವು ಕರ್ತನನ್ನೂ ಆತನ ಅತ್ಯಧಿಕವಾದ ಶಕ್ತಿಯನ್ನೂ ಆಶ್ರಯಿಸಿಕೊಂಡವರಾಗಿ ಬಲಗೊಳ್ಳಿರಿ.

**ಕೊಲೊಸ್ಸೆಯವರಿಗೆ 3:22-25**

[22] ದಾಸತ್ವದಲ್ಲಿರುವವರೇ (ಉದ್ಯೋಗಿ), ಈ ಲೋಕದಲ್ಲಿನ ನಿಮ್ಮ ಯಜಮಾನರಿಗೆ (ಉದ್ಯೋಗದಾತರು) ಎಲ್ಲಾ ವಿಷಯಗಳಲ್ಲಿ ವಿಧೇಯರಾಗಿರಿ; ಮನುಷ್ಯರನ್ನು ಮೆಚ್ಚಿಸುವವರು ಮಾಡುವ ಪ್ರಕಾರ ನಿಮ್ಮ ಯಜಮಾನರು ನೋಡುತ್ತಿರುವಾಗ ಮಾತ್ರ ಸೇವೆ ಮಾಡದೆ ಕರ್ತನಿಗೆ ಭಯಪಡುವವರಾಗಿ ಸರಳಮನಸ್ಸಿನಿಂದ ಕೆಲಸಮಾಡಿರಿ.

[23] ನೀವು ಯಾವ ಕೆಲಸವನ್ನು ಮಾಡಿದರೂ ಅದನ್ನು ಮನುಷ್ಯರಿಗೋಸ್ಕರವೆಂದು ಮಾಡದೆ ಕರ್ತನಿಗೋಸ್ಕರವೇ ಎಂದು ಮನಃಪೂರ್ವಕವಾಗಿ ಮಾಡಿರಿ;

[24] ಕರ್ತನಿಂದ ಪರಲೋಕ ಬಾಧ್ಯತೆಯೆಂಬ ಪ್ರತಿಫಲವನ್ನು ಹೊಂದುವೆವೆಂದು ತಿಳಿದಿದ್ದೀರಲ್ಲಾ. ನೀವು ಕರ್ತನಾದ ಕ್ರಿಸ್ತನಿಗೇ ದಾಸರಾಗಿದ್ದೀರಿ.

[25] ಅನ್ಯಾಯಮಾಡುವವನು ತಾನು ಮಾಡಿದ ಅನ್ಯಾಯಕ್ಕೆ ತಕ್ಕ ಪ್ರತಿಫಲವನ್ನು ಹೊಂದುವನಷ್ಟೆ; ಪಕ್ಷಪಾತವಿರುವದಿಲ್ಲ.

ಎರಡು ವಾಕ್ಯಭಾಗಗಳು ತಮ್ಮ ಸೂಚನೆಯಲ್ಲಿ ಗಮನಾರ್ಹವಾಗಿ ಹೋಲುತ್ತವೆ. ನಮ್ಮ ದಿನಗಳಲ್ಲಿ ಯಜಮಾನ ಮತ್ತು ಗುಲಾಮ ಎಂಬ ಪರಿಕಲ್ಪನೆ ನಮಗೆ ಇಲ್ಲ. ಹೇಗಿದ್ದರೂ, "ಯಜಮಾನ" ಮತ್ತು "ಜೀತದಾಳು" ಇದನ್ನು "ಉದ್ಯೋಗದಾತ" ಮತ್ತು "ಉದ್ಯೋಗಸ್ಥ" ಎಂಬುದಾಗಿ ಅರ್ಥಮಾಡಿಕೊಳ್ಳುವಾಗ ಅವುಗಳು ನಮ್ಮ ದಿನಗಳಿಗೆ ಸಂಮಂಜಸವಾಗುತ್ತದೆ.

## ಕೆಲಸದ ಕುರಿತು ಪೌಲನು ಏಳು ಮನೋಭಾವಗಳನ್ನು ಪ್ರಸ್ತುತಪಡಿಸುತ್ತಾನೆ

1) ಉದ್ಯೋಗಸ್ಥರಾದ ನಾವು ನಮ್ಮ ಉದ್ಯೋಗದಾತರಿಗೆ ವಿಧೇಯರಾಗಿರಬೇಕೆಂದು ಪೌಲನು ಉಪದೇಶಿಸುತ್ತಾನೆ. ನಮ್ಮ ಕೆಲಸದ ಸ್ಥಳದ ಸೂಚನೆಗಳಿಗೆ ಮತ್ತು ನಿಯಮಗಳಿಗೆ ನಾವು ಬದ್ಧರಾಗಿದ್ದೇವೆ ಮತ್ತು ಹಿಂಬಾಲಿಸುವವರಾಗಿದ್ದೇವೆ ಎಂಬುದು ಇದರ ಅರ್ಥ.

2) ಮತ್ತು, ನಮ್ಮ ಉದ್ಯೋಗದಾತರ ಕುರಿತು ಗೌರವ ಮತ್ತು ಮಾನ (ಭಯ ಮತ್ತು ನಡುಗುವಿಕೆ (ಎಫೆಸದವರಿಗೆ 6:5)) ನಮಗಿರಬೇಕು. ನಮ್ಮ ಯಜಮಾನರಿಗಿಂತ ನಮಗೆ ಹೆಚ್ಚು ತಿಳಿದಿದೆ ಆಲೋಚಿಸುವದು ಮತ್ತು ದಂಗೆ ಏಳುವ ಬದಲಾಗಿ, ನಮ್ಮ ಕೆಲಸದ ಸ್ಥಳದಲ್ಲಿ ನಮ್ಮ ಮೇಲಿರುವ ಮೇಲ್ವಿಚಾರಕರಿಗೆ ಗೌರವ ಮತ್ತು ಮಾನವನ್ನು ಸಲ್ಲಿಸಬೇಕು.

3) ಪೌಲನು ಉದ್ದೇಶದ ಶುದ್ಧತೆ *"ಹೃದಯದ ಪ್ರಾಮಾಣಿಕತೆ"* (ಕೊಲೊಸ್ಸೆಯವರಿಗೆ 3:22) ಅಥವಾ "ಹೃದಯದ ಏಕತೆ" ಬಗ್ಗೆ ಮಾತನಾಡುತ್ತಾನೆ. ನಿಮ್ಮ ಕೆಲಸದಲ್ಲಿ ಪ್ರಾಮಾಣಿಕವಾಗಿರ್ರಿ. "ಪ್ರಾಮಾಣಿಕತೆ" ಅಥವಾ "ಏಕತೆ" ಎನ್ನುವ ಪದವು ಗ್ರೀಕ್ ಪದದಿಂದ ಬರುವಂತದ್ದಾಗಿದೆ ಅದರರ್ಥ "ಅಸಮಾನತೆ ಇಲ್ಲದಿರುವದು" ಅಥವಾ "ಸ್ವಾರ್ಥ ಹುಡುಕುವದಲ್ಲ". ಇದು "ಉದಾರತೆ, ಔದಾರ್ಯತೆ, ಧಾರಾಳತೆ, ಸರಳತೆ" ಯ ಅರ್ಥವನ್ನು ಸಹ ಕೊಡುತ್ತದೆ.

4) ಪೌಲನು ಆತ್ಮಸಾಕ್ಷಿಯ ಕುರಿತು ಸಹ ಮಾತನಾಡುತ್ತಾನೆ—ಯಾರು ನಮ್ಮನ್ನು ನೋಡದಿರುವಾಗಲೂ ಸಹ ಹೊಣೆಗಾರರಾಗಿರುವದು. ಅವನು ಹೇಳುತ್ತಾನೆ *"ಮನುಷ್ಯರನ್ನು ಮೆಚ್ಚಿಸುವವರಾಗಿ ನೋಡುವಾಗ ಮಾತ್ರ ಮಾಡದೆ"* (ಕೊಲೊಸ್ಸೆಯವರಿಗೆ 3:22). ನಾವು ಕ್ರಿಸ್ತನ

ಉದ್ಯೋಗಸ್ಥರಾಗಿರುವ ಸತ್ಯಾಂಶವೇ ಇದಕ್ಕೆ ಸ್ಪೂರ್ತಿಯಾಗಿದೆ. ನಾವು ಯಾವುದೇ ಕಂಪನಿ ಅಥವಾ ಸಂಸ್ಥೆಗೆ ಉದ್ಯೋಗಸ್ಥರಾಗಿದ್ದೇವೆ ಎಂಬುದಕ್ಕೆ ಮೊದಲು ನಾವು ಕ್ರಿಸ್ತನ ಉದ್ಯೋಗಸ್ಥರಾಗಿದ್ದೇವೆ ಎಂದು ಅರ್ಥಮಾಡಿಕೊಳ್ಳುವದು ಬಹು ಪ್ರಾಮುಖ್ಯ. ನಮ್ಮ ಕೆಲಸದ ಸ್ಥಳಗಳಲ್ಲಿ ನಾವುಕ್ರಿಸ್ತನಉದ್ಯೋಗಸ್ಥರಾಗಿದ್ದೇವೆ.ನಾವುಕ್ರಿಸ್ತನನ್ನುಪ್ರತಿನಿಧಿಸುತ್ತೇವೆ ಮತ್ತು ಕೆಲಸ ಮಾಡುತ್ತೇವೆ *"ಮನುಷ್ಯರಿಗಾಗಿ ಅಲ್ಲ, ಕ್ರಿಸ್ತನಿಗಾಗಿ"* (ಕೊಲೊಸ್ಸೆಯವರಿಗೆ 3:23), ಯಾಕೆಂದರೆ ನಾವು ಕರ್ತನಿಗಾಗಿ ಕೆಲಸ ಮಾಡುವವರಾಗಿದ್ದೇವೆ. ನಮ್ಮ ಮುಖ್ಯ ಉದ್ಯೋಗಸ್ಥನಾದ ಕ್ರಿಸ್ತನು, ನಮ್ಮನ್ನು ನೋಡುತ್ತಿದ್ದಾನೆ. ಸಮಯಕ್ಕೆ ಸರಿಯಾಗಿ ನಾವು ಕೆಲಸಕ್ಕೆ ಹೋಗುತ್ತಿದ್ದೇವಾ ಎಂದು ಆತನು ನೋಡುವವನಾಗಿದ್ದಾನೆ. ಆತನು ನಮ್ಮ ಸಮಯಪಾಲನೆ ನೋಡುವವನಾಗಿದ್ದಾನೆ, ಕೆಲಸಕ್ಕೆ ನಮ್ಮ ಹಾಜರಾತಿ ಅಥವಾ ಗೈರನ್ನು ನೋಡುವವನಾಗಿದ್ದಾನೆ. ನಮಗೆ ಅನಾರೋಗ್ಯ ಎಂದು ಹೇಳಿ ಬೇರೆ ಏನೊ ಕೆಲಸ ಮಾಡಲು ರಜಾ ತೆಗೆದುಕೊಂಡ, ಕೆಲಸಕ್ಕೆ ಗೈರಾದದ್ದರ ನಿಜವಾದ ಕಾರಣ ಸಹ ಆತನಿಗೆ ಗೊತ್ತಿದೆ. ಕೆಲಸದಲ್ಲಿ ನಮ್ಮ ಸಮಯ ಹೇಗೆ ಬಳಕೆಯನ್ನು ಮಾಡುತ್ತೇವೆ ಎಂದು ಆತನು ನೋಡುವವನಾಗಿದ್ದಾನೆ. ನಾವು ನಿಜವಾಗಲೂ ಕೆಲಸ ಮಾಡುತ್ತಿದ್ದೇವಾ ಅಥವಾ ನಮ್ಮ ಸಮಯವನ್ನು ವ್ಯರ್ಥ ಮಾಡುತ್ತಿದ್ದೇವಾ? ನಾವು ತೆಗೆದುಕೊಳ್ಳಲು ಪ್ರತ್ನಿಸುವ ಎಲ್ಲಾ "ಅಡ್ಡದಾರಿಗಳು" ಆತನು ನೋಡುವವನಾಗಿದ್ದಾನೆ. ನಾವು ಒಂದು ವೇಳೆ ಸುಳ್ಳಾದ ಹೇಳಿಕೆಗಳನ್ನು ಕೊಡುತ್ತಿದ್ದೆವಾ, ಅಪ್ರಾಮಾಣಿಕ ವರಧಿಗಳು ಮತ್ತು ಮುಂತಾದವುಗಳನ್ನು ಆತನು ನೋಡುವವನಾಗಿದ್ದಾನೆ.

5) ನಮ್ಮ ಕೆಲಸ ಮಾಡುವದರ ಕುರಿತು ಪೌಲನು *"ಹೃದಯದಿಂದ ಕರ್ತನ ಚಿತ್ತವನ್ನು ಮಾಡುವದು"* (ಎಫೆಸದವರಿಗೆ 6:6) ಅಥವಾ *"ಹೃದಯದಿಂದ ಕರ್ತನಿಗೆ"* (ಕೊಲೊಸ್ಸೆಯವರಿಗೆ 3:23) ಕೆಲಸ ಮಾಡುವದು ಎಂದು ಹೇಳುತ್ತಾನೆ. ನಮಗೆ ನಿಯೋಜಿಸಲಾದ ಕೆಲಸವನ್ನು ನಾವು ಪೂರ್ಣ ಹೃದಯದಿಂದ ಮಾಡಬೇಕು. ಅರೆ-ಮನಸ್ಸಿನ ಪ್ರಯತ್ನ ಮಾಡಬೇಡಿರಿ ಬದಲಾಗಿ, ನಿಮಗಿರುವದನ್ನೆಲ್ಲಾ ಕೊಡಿರಿ. ನಿಮ್ಮ ಅತೀ ಉತ್ತಮವಾದದ್ದನ್ನು ಕೊಡಿರಿ. ಯೇಸುವಿಗಾಗಿ ಎಂಬಂತೆ ಮಾಡಿರಿ.

6) ನಂತರ ಪೌಲನು ನಮಗೆ *"ಸದಾಶಯದ ಸೇವೆ ಮಾಡುವ"*

(ಎಫೆಸದವರಿಗೆ 6:7) ಕೆಲಸವನ್ನು ಮಾಡಬೇಕೆಂದು ಉಪದೇಶಿಸುತ್ತಾನೆ. ನಿಮ್ಮ ಕೆಲಸವನ್ನು ಹರ್ಷಚಿತ್ತದಿಂದ ಮಾಡಿರಿ, ಗುಣಗುಟ್ಟುತ್ತಾ, ದೂರುತ್ತಾ ಅಲ್ಲ. ಸತ್ಯವೇದ ಸಂದೇಶವನ್ನು ಈ ವಿಧದಲ್ಲಿ ಹಾಕುತ್ತದೆ– *"ಮನುಷ್ಯರಿಗೋಸ್ಕರವಲ್ಲ, ಕರ್ತನಿಗೋಸ್ಕರ ಸೇವೆಮಾಡುತ್ತೇವೆಂದು ಚಿತ್ತಪೂರ್ವಕವಾಗಿ ಸೇವೆಮಾಡಿರಿ"* (ಎಫೆಸದವರಿಗೆ 6:7).

7) ಕೊನೆಯದಾಗಿ ಪೌಲನು ಹೇಳುತ್ತಾನೆ, *"ನಿಮ್ಮ ಪ್ರತಿಫಲಕ್ಕಾಗಿ ಕರ್ತನನ್ನು ದೃಷ್ಟಿಸಿರಿ"* (ಕೊಲೊಸ್ಸೆಯವರಿಗೆ 3:24). ಕ್ರಿಸ್ತನು ನಿಮ್ಮ ಉದ್ಯೋಗಸ್ಥನಾಗಿರುವದರಿಂದ ನಿಮ್ಮ ಉತ್ತಮವಾದದ್ದನ್ನು ಮಾಡಿ ಮುಗಿಸಿದ ಮೇಲೆ ಆತನು ನಂಬಿಗಸ್ಥನಾಗಿರುವರಿಂದ ನಿಮಗೆ ಪ್ರತಿಫಲ ನೀಡುವನು ಎಂದು ನೀವು ಖಚಿತತೆ ಹೊಂದಿರಬಹುದು. ನಿಮ್ಮ ಪ್ರತಿಫಲಕ್ಕಾಗಿ ಕರ್ತನನ್ನು ನೀವು ನೋಡುತ್ತಿರುವಾಗ, ನೀವು ಲೋಕದ ಹಾಗೆ ನಡೆದುಕೊಳ್ಳುವದನ್ನು ನಿಲ್ಲಿಸುವಿರಿ. ಲೋಕದಲ್ಲಿರುವ ಜನರು ಕೆಲಸದ ಸ್ಥಳದಲ್ಲಿ ಕೇವಲ ಮುಂದೆ ಬರುವ ಸಲುವಾಗಿ "ತಳ್ಳುವರು ಮತ್ತು ನೂಕುವರು" ಆದರೆ ವಿಶ್ವಾಸಿಗಳಾಗಿ ನಾವು ಶಾಂತವಾಗಿ, ವಿಶ್ರಮವಾಗಿ ಇರಬೇಕು ಮತ್ತು ನಮ್ಮ ಉತ್ತಮವಾದದ್ದನ್ನು ಕೊಡುತ್ತಾ ಒಳ್ಳೆಯ ಹೃದಯದಿಂದ ಕೆಲಸ ಮಾಡಬೇಕು. ಪರಲೋಕದ ದೇವರು ನಮಗೆ ಪ್ರತಿಫಲ ಕೊಡುವನು. ಕೆಲಸದ ಸ್ಥಳದಲ್ಲಿ ದೇವರು ನಮ್ಮನ್ನು ಬಡ್ತಿ ಮಾಡಬೇಕೆಂದು ನಿರ್ಧರಿಸುವಾಗ, ಯಾವ ಮನುಷ್ಯನು ಅಡ್ಡಿ ಬರಲಾರನು! ಮತ್ತು ನಿಮಗೆ ಬರಬೇಕಾದ ಪ್ರತಿಫಲದ ಒಂದು ಭಾಗವು ಬರಬೇಕಾದ ಲೋಕದಲ್ಲಿದೆ ಎಂಬುದನ್ನು ನೆನಪಿನಲ್ಲಿಡಿ. ಇನ್ನೊಂದು ಬದಿಯಲ್ಲಿ ನಿಮ್ಮ ಬಾಧ್ಯತೆಯನ್ನು ಹೊಂದುವದಕ್ಕಾಗಿ ನೀವು ಬರುವಾಗ ನಿಮಗೆ ಪೂರ್ಣ ಪಾವತಿಯಾಗುವದು!

ಬಹುಶಃ ಕೊಲೊಸ್ಸೆಯವರಿಗೆ 3:22–25 ರಲ್ಲಿರುವ ಸಂದೇಶವು ಸತ್ಯವೇದ ಸಂಗತಿಗಳನ್ನು ಸರಳ ಮತ್ತು ಸ್ಪಷ್ಟವಾಗಿ ಮಾಡುತ್ತದೆ.

**ಕೊಲೊಸ್ಸೆಯವರಿಗೆ 3:22-25**

**22 ದಾಸತ್ವದಲ್ಲಿರುವವರೇ, ಈ ಲೋಕದಲ್ಲಿನ ನಿಮ್ಮ ಯಜಮಾನರಿಗೆ ಎಲ್ಲಾ ವಿಷಯಗಳಲ್ಲಿ ವಿಧೇಯರಾಗಿರಿ; ಮನುಷ್ಯರನ್ನು ಮೆಚ್ಚಿಸುವವರು ಮಾಡುವ ಪ್ರಕಾರ ನಿಮ್ಮ ಯಜಮಾನರು ನೋಡುತ್ತಿರುವಾಗ ಮಾತ್ರ ಸೇವೆ ಮಾಡದೆ ಕರ್ತನಿಗೆ ಭಯಪಡುವವರಾಗಿ ಸರಳಮನಸ್ಸಿನಿಂದ ಕೆಲಸಮಾಡಿರಿ.**

**[23] ನೀವು ಯಾವ ಕೆಲಸವನ್ನು ಮಾಡಿದರೂ ಅದನ್ನು ಮನುಷ್ಯರಿಗೋಸ್ಕರವೆಂದು ಮಾಡದೆ ಕರ್ತನಿಗೋಸ್ಕರವೇ ಎಂದು ಮನಃಪೂರ್ವಕವಾಗಿ ಮಾಡಿರಿ;**
**[24] ಕರ್ತನಿಂದ ಪರಲೋಕ ಬಾಧ್ಯತೆಯೆಂಬ ಪ್ರತಿಫಲವನ್ನು ಹೊಂದುವೆವೆಂದು ತಿಳಿದಿದ್ದೀರಲ್ಲಾ. ನೀವು ಕರ್ತನಾದ ಕ್ರಿಸ್ತನಿಗೇ ದಾಸರಾಗಿದ್ದೀರಿ.**
**[25] ಅನ್ಯಾಯಮಾಡುವವನು ತಾನು ಮಾಡಿದ ಅನ್ಯಾಯಕ್ಕೆ ತಕ್ಕ ಪ್ರತಿಫಲವನ್ನು ಹೊಂದುವನಷ್ಟೆ; ಪಕ್ಷಪಾತವಿರುವದಿಲ್ಲ.**

## ಪೂರ್ಣಾವಧಿ ಸೇವಕರಿಗೆ ಒಂದು ಮಾತು

ಒಮ್ಮೆ, ಬೆಂಗಳೂರಿನಲ್ಲಿರುವ ಸಭಾಪಾಲಕರೊಬ್ಬರು ನನ್ನ ಕಛೇರಿಯಲ್ಲಿ ನಾನು ಎಷ್ಟು ತಾಸುಗಳು ಕೆಲಸ ಮಾಡುತ್ತೇನೆ ಎಂದು ನನಗೆ ಕೇಳಿದರು, ನಾನು ಅವರಿಗೆ ಸಾಮಾನ್ಯ ಕೆಲಸದ ವಾರದಲ್ಲಿ ಸುಮಾರು 40 ಮತ್ತು 50 ತಾಸುಗಳು ಕೆಲಸ ಮಾಡುತ್ತೇನೆ ಎಂದು ಹೇಳಿದೆ. ಅವರು ಆಶ್ಚರ್ಯಚಕಿತರಾದರು ಮತ್ತು ಪೂರ್ಣಾವಧಿ ಸೇವಕನಾಗಿ ಕೆಲವೊಮ್ಮೆ ಒಂದು ದಿನಕ್ಕೆ ನಾಲ್ಕು ತಾಸುಗಳು ಸಹ ಕೆಲಸ ಮಾಡಲಿಲ್ಲ ಎಂದು ಅವರು ಅರಿಕೆ ಮಾಡಿದರು. ಪೂರ್ಣಾವಧಿ ಸೇವಕರು—ಸಭಾಪಾಲಕರು, ಸುವಾರ್ತಿಕರು ಮತ್ತು ಇತರ ಸೇವೆಗಳು—ಸಹ “ಲೌಕಿಕ” ಕೆಲಸದಲ್ಲಿರುವವರಂತೆ ಅದೇ ಕೆಲಸದ ನೀತಿಗಳು ಮತ್ತು ಕೆಲಸದ ಶಿಸ್ತುಗಳನ್ನು ಪಾಲಿಸಬೇಕು. ವಾರಕ್ಕೆ 40 ತಾಸುಗಳಂತೆ, ಒಂದು ದಿನಕ್ಕೆ ಕನಿಷ್ಟ ಎಂಟು ತಾಸುಗಳು ಸೇವೆಯ ಕೆಲಸವನ್ನು ನೀವು ಮಾಡಬೇಕು! ಒಳ್ಳೆಯ ಕೆಲಸದ ಅಭ್ಯಾಸಗಳನ್ನು ಕಾಪಾಡಿಕೊಳ್ಳಲು ನೀವು ಶಿಸ್ತುಳ್ಳವರಾಗಿರಬೇಕು.

# 6
# ನಿಮ್ಮ ಕೆಲಸ ಕುರಿತಾದ ವಾಗ್ದಾನಗಳು

ವಾಕ್ಯದಲ್ಲಿ ಕೆಲಸಕ್ಕೆ ಸಂಬಂಧಿಸಿದ ಅನೇಕ ವಾಗ್ದಾನಗಳಿವೆ. ಹಿಂದಿನ ಅಧ್ಯಾಯದಲ್ಲಿ ನಾವು ಮಾಡುವಂತ ಕೆಲಸಗಳಿಗೆ ಕರ್ತನು ಪ್ರತಿಫಲ ಕೊಡುತ್ತಾನೆ ಎಂದು ನೋಡಿಕೊಂಡೆವು. ನಮ್ಮ ಪ್ರತಿಫಲದ ಒಂದು ಭಾಗ ಪರಲೋಕದಲ್ಲಿ ಕರ್ತನನ್ನು ಎದುರುಗೊಳ್ಳುವಾಗ ಕೊಡುವವನಾಗಿದ್ದಾನೆ ಮತ್ತು ನಮ್ಮ ಪ್ರತಿಫಲದ ಮತ್ತೊಂದು ಭಾಗ ಈಗಿನ ಪ್ರಸ್ತುತ ಕಾಲದಲ್ಲಿ ಕೊಡಲ್ಪಡುತ್ತದೆ. ನಾವು ಇಲ್ಲಿರುವಾಗಲೇ ನಿರೀಕ್ಷಿಸಬಹುದಾದಂತ ಕೆಲವು ವಾಗ್ದಾನಗಳು ಇಲ್ಲಿವೆ.

## ನಿಮ್ಮ ಕೈಕೆಲಸಗಳ ಮೇಲೆ ಆಶೀರ್ವಾದ

**ಧರ್ಮೋಪದೇಶಕಾಂಡ 28:8**

**ನಿಮ್ಮ ಕಣಜಗಳು ಯಾವಾಗಲೂ ತುಂಬಿರುವಂತೆಯೂ ನಿಮ್ಮ ಪ್ರಯತ್ನಗಳೆಲ್ಲಾ ಸಫಲವಾಗುವಂತೆಯೂ ನಿಮ್ಮ ದೇವರಾದ ಯೆಹೋವನು ನಿಮಗೆ ಶುಭವನ್ನು ಅನುಗ್ರಹಿಸುವನು. ಆತನು ನಿಮಗೆ ಕೊಡುವ ದೇಶದಲ್ಲಿ ನಿಮಗೆ ಶುಭವನ್ನೇ ಉಂಟುಮಾಡುವನು.**

**ಧರ್ಮೋಪದೇಶಕಾಂಡ 28:12**

**ಯೆಹೋವನು ಆಕಾಶದಲ್ಲಿರುವ ತನ್ನ ಜಲನಿಧಿಯನ್ನು ತೆರೆದು ನಿಮ್ಮ ದೇಶದ ಮೇಲೆ ಬೆಳೆಗೆ ಬೇಕಾದ ಹಾಗೆ ಮಳೆಯನ್ನು ಸುರಿಸಿ ನಿಮ್ಮ ಎಲ್ಲಾ ವ್ಯವಸಾಯವನ್ನೂ ಸಫಲಮಾಡುವನು. ನೀವು ಅನೇಕ ಜನಗಳಿಗೆ ಸಾಲಕೊಡುವಿರೇ ಹೊರತು ಸಾಲತೆಗೆದುಕೊಳ್ಳುವದಿಲ್ಲ.**

ಹಳೇ ಒಡಂಬಡಿಕೆಯ ಅಡಿಯಲ್ಲಿ ಈ ವಾಗ್ದಾನಗಳು ದೇವಜನರಿಗೆ ಕೊಡಲ್ಪಟ್ಟಿದೆ. ಹಳೇ ಒಡಂಬಡಿಕೆಯ ಅದೇ ದೇವರು ಹೊಸ ಒಡಂಬಡಿಕೆಯ ದೇವರು ಸಹ ಆಗಿದ್ದಾನೆ. ಒಡಂಬಡಿಕೆಗಳು ಬದಲಾಗಿವೆ ಆದರೆ ಒಡಂಬಡಿಕೆಯ ದೇವರು, ಆತನ ಹೃದಯ ಮತ್ತು ತನ್ನ ಜನರನ್ನು ಆಶೀರ್ವದಿಸುವ ಆತನ ಸಾಮರ್ಥ್ಯ ಬದಲಾಗಿಲ್ಲ! ಹಾಗಾಗಿ, ಅನುಮಾನದ ನೆರಳಿಲ್ಲದೆ, ನಮ್ಮೆಲ್ಲಾ ಕೈಕೆಲಸಗಳನ್ನು ನಮ್ಮ ದೇವರು ಆಶೀರ್ವದಿಸುತ್ತಾನೆ ಎಂದು ನಾವು ನಿರೀಕ್ಷಿಸಬಹುದು. ಪ್ರತಿದಿನ ನೀವು ನಿಮ್ಮ ಕೆಲಸದ ಸ್ಥಳಕ್ಕೆ ಕಾಲಿಡುವಾಗ,

## ದೇವರ ಅಶೀರ್ವಾದಗಳು ನಿಮ್ಮ ಮೇಲಿರುವಂತೆ ನಿರೀಕ್ಷಿಸಿ!

## ಬಡ್ತಿಯು ಕರ್ತನಿಂದ ಬರುವಂತದ್ದಾಗಿದೆ

**ಧರ್ಮೋಪದೇಶಕಾಂಡ 28:13**

**ನಾನು ಈಗ ನಿಮಗೆ ಬೋಧಿಸುವ ಮಾತುಗಳನ್ನು ನೀವು ಬಿಟ್ಟು ಎಡಬಲಕ್ಕೆ ತೊಲಗದೆ ಬೇರೆ ದೇವರುಗಳನ್ನು ಅವಲಂಬಿಸದೆ ನಿಮ್ಮ ದೇವರಾದ ಯೆಹೋವನ ಆಜ್ಞೆಗಳಲ್ಲೇ ಲಕ್ಷ್ಯವಿಟ್ಟು ಅವುಗಳನ್ನೇ ಅನುಸರಿಸಿ ನಡೆದರೆ ಆತನು ಇತರರಿಗೆ ನಿಮ್ಮನ್ನು ಅಧೀನಮಾಡದೆ ಎಲ್ಲರಿಗೂ ಶಿರಸ್ಸನ್ನಾಗಿಯೇ ಮಾಡುವನು; ನೀವು ಎಲ್ಲರಿಗಿಂತಲೂ ಮೇಲಣವರಾಗಿರುವಿರೇ ಹೊರತು ಕೆಳಗಣವರಾಗಿರುವದಿಲ್ಲ.**

**ಕೀರ್ತನೆಗಳು 75:6,7**

**6 ಯಾಕಂದರೆ ಉದ್ಧಾರವು ಮೂಡಲಿಂದಾಗಲಿ ಪಡುವಲಿಂದಾಗಲಿ ಅರಣ್ಯದಿಂದಾಗಲಿ ಬರುವದಿಲ್ಲ.**
**7 ದೇವರೇ ನ್ಯಾಯಾಧೀಶನಾಗಿ ಒಬ್ಬನನ್ನು ತೆಗೆದು ಇನ್ನೊಬ್ಬನನ್ನು ಸ್ಥಾಪಿಸುತ್ತಾನೆ.**

ದೇವರು ನಿಮಗಾಗಿ ಇದ್ದಾನೆ. ನಿಮಗೆ ಬಡ್ತಿಯಾಗುವದಕ್ಕೆ ಜಾಗವನ್ನು ಮಾಡುವವನು ದೇವರೇ. ಕೆಲಸದಲ್ಲಿ ನಿಮ್ಮ ಪರಿಶ್ರಮವನ್ನು ದೇವರು ನೋಡುತ್ತಾನೆ ಮತ್ತು ನಿಮ್ಮ ಬಡ್ತಿಗೆ ಜಾಗ ಮಾಡುವವನಾಗಿದ್ದಾನೆ. ನಿಮ್ಮ ಸಹೋದ್ಯೋಗಿಗಳನ್ನು "ತಳ್ಳುವ ಮತ್ತು ನೂಕುವ," "ಕಡಿಮೆ ಮಾಡುವ ಪ್ರಯತ್ನ ಮಾಡಬೇಕಾಗಿಲ್ಲ" ಅಥವಾ ನಮ್ಮ ಉದ್ಯೋಗದಾತರ "ಅಂಗೈಗೆ ಬೆಣ್ಣೆ ಹಚ್ಚುವ" ಅವಶ್ಯವಿಲ್ಲ. ನಿಮ್ಮ ಉತ್ತಮವಾದದ್ದನ್ನು ಕೊಡುತ್ತಾ ಸುಮ್ಮನೆ ಪರಿಶ್ರಮದಿಂದ ಕೆಲಸ ಮಾಡಿರಿ ಮತ್ತು ದೇವರು ನಿಮ್ಮ ಬಡ್ತಿಗೆ ದಾರಿ ಮಾಡಿಕೊಡುತ್ತಾನೆ ಎಂದು ನಿರೀಕ್ಷಿಸಿ. ಚಿಕಾಗೋದಲ್ಲಿ ಸಾಫ್ಟ್ ವೇರ್ ಕಂಪನಿಯೊಂದಕ್ಕೆ ಕೆಲಸ ಮಾಡುತ್ತಿರುವಾಗ, ನಾನು ತುಂಬಾ ಹತಾಶನಾಗುತ್ತಿದ್ದನ್ನು ಜ್ಞಾಪಿಸಿಕೊಳ್ಳುತ್ತೇನೆ. "ದೇವರೆ ನನ್ನನ್ನು ಬಡ್ತಿ ಮಾಡು ಏಕೆಂದರೆ ನಾನು ಪೂರ್ಣಪ್ರಮಾಣದಲ್ಲಿ ಬಳಸಲ್ಪಡುತ್ತಿದ್ದೇನೆ ಎಂದು ನನಗೆ ಅನ್ನಿಸುತ್ತಿಲ್ಲ. ಹೆಚ್ಚು ಜವಾಬ್ದಾರಿಕೆಗಳನ್ನು ನಿಭಾಯಿಸಲು ಸಾಧ್ಯ ಮತ್ತು ಜನರ ತಂಡವನ್ನು ನಡೆಸಲು ನನ್ನಿಂದ ಸಾಧ್ಯ ಎಂದು ನಂಬುತ್ತೇನೆ" ಎಂದು ನಾನು ಪ್ರಾರ್ಥಿಸುತ್ತಿದ್ದೆ. ದೇವರ ವಾಕ್ಯಕ್ಕೆ ಅನುಸಾರವಾಗಿ, ಬಡ್ತಿಯು ಕರ್ತನಿಂದ ಬರುತ್ತದೆ ಎಂದು ನಾನು ನಂಬಿದ್ದೆ. ಶೀಘ್ರವೇ, ನನ್ನ ಪರಿಸ್ಥಿತಿಯು ಬದಲಾಯಿತು ಮತ್ತು ನನ್ನ ವ್ಯವಸ್ಥಾಪಕರು ಜನರ ತಂಡಗಳ ಮೇಲೆ ನನ್ನನ್ನು ಉಸ್ತುವಾರಿಯಾಗಿ ನೇಮಿಸಿದರು ಮತ್ತು ನನ್ನನ್ನು ತಂಡದ ನಾಯಕನನ್ನಾಗಿ

ಮಾಡಿದರು. ಬಡ್ತಿಯು ಕರ್ತನಿಂದ ಬಂದಿತು!

## ನಿಮ್ಮ ಶ್ರಮದ ಫಲವನ್ನು ಆನಂದಿಸಿರಿ

**ಪ್ರಸಂಗಿ 3:13**

**ಇದಲ್ಲದೆ ಪ್ರತಿಯೊಬ್ಬನು ಅನ್ನಪಾನಗಳನ್ನು ತೆಗೆದುಕೊಂಡು ತನ್ನ ನಾನಾ ಪ್ರಯಾಸಗಳಲ್ಲಿಯೂ ಸುಖವನ್ನನುಭವಿಸುವದು ದೇವರ ಅನುಗ್ರಹವೇ ಎಂದು ನನಗೆ ಗೊತ್ತಿದೆ.**

**ಕೀರ್ತನೆಗಳು 128:1,2**

**1 ಯೆಹೋವನಲ್ಲಿ ಭಯಭಕ್ತಿಯುಳ್ಳವನಾಗಿ ಆತನ ಮಾರ್ಗಗಳಲ್ಲಿ ನಡೆಯುವವನು ಧನ್ಯನು.**
**2 ನಿನ್ನ ಕಷ್ಟಾರ್ಜಿತವನ್ನು ನೀನೇ ಅನುಭವಿಸುವಿ; ನೀನು ಧನ್ಯನು, ನಿನಗೆ ಶುಭವಿರುವದು.**

**ಪ್ರಸಂಗಿ 5:18,19**

**18 ಇಗೋ ನಾನು ಕಂಡದ್ದು ಇದೇ; ದೇವರು ಒಬ್ಬನಿಗೆ ದಯಪಾಲಿಸಿರುವ ಜೀವಮಾನದ ದಿನಗಳಲ್ಲೆಲ್ಲಾ ಅವನು ಅನ್ನಪಾನಗಳನ್ನು ತೆಗೆದುಕೊಂಡು ತಾನು ಲೋಕದೊಳಗೆ ಪಡುವ ಪ್ರಯಾಸದಲ್ಲಿಯೂ ಸುಖವನ್ನನುಭವಿಸುವದು ಮೇಲಾಗಿಯೂ ಉಚಿತವಾಗಿಯೂ ಇದೆ; ಇದೇ ಅವನ ಪಾಲು.**
**19 ಮತ್ತೂ ಆತನು ಯಾವನಿಗೆ ಆಸ್ತಿಪಾಸ್ತಿಗಳನ್ನು ದಯಪಾಲಿಸುವದಲ್ಲದೆ ಅದನ್ನು ಅನುಭವಿಸಿ ಪಾಲಿಗೆ ಬಂದದ್ದನ್ನು ಹೊಂದಿ ತನ್ನ ಪ್ರಯಾಸದಲ್ಲಿ ಸಂತೋಷಪಡಲು ಶಕ್ತಿಕೊಡುವನೋ, ಅವನ ಸುಖವು ದೇವರ ಅನುಗ್ರಹ.**

ನಿಮ್ಮ ಕೆಲಸದಲ್ಲಿ ಹರ್ಷಿಸುವ ಸಾಮರ್ಥ್ಯ—ನಿಮ್ಮ ಕೆಲಸದ ಪ್ರತಿಫಲವನ್ನು ಆನಂದಿಸುವದು—ದೇವರಿಂದಾದ ಒಂದು ಆಶೀರ್ವಾದ ಮತ್ತು ಒಂದು ಉಡುಗೊರೆಯಾಗಿದೆ. ನಿಮ್ಮ ಕೆಲಸದ ಪ್ರತಿಫಲವನ್ನು ನೀವು ನಿಶ್ಚಯವಾಗಿಯೂ ಅನಂದಿಸುವಿರಿ ಎಂದು ದೇವರಲ್ಲಿ ಭರವಸವಿಡಿರಿ. ಕಷ್ಟಪಟ್ಟು ಕೆಲಸ ಮಾಡುವವರು ಅನೇಕರಿದ್ದಾರೆ ಆದರೆ ಅವರು ತಮ್ಮ ಕೆಲಸದಿಂದ ಪಡೆದದ್ದು ಗಾಳಿಯಿಂದ ಒಯ್ಯುವಂತೆ ತೋರುತ್ತದೆ. ಅವರ ಸಂಬಳ ತೂತಾದ ಚೀಲದಲ್ಲಿ ಹೋದಂತೆ ಅನ್ನಿಸುತ್ತದೆ. ಇತರರಿಗೆ ಬಹಳಷ್ಟು ಹಣವಿದೆ ಆದರೆ ಸಂತೋಷ ಮತ್ತು ಸಮಾಧಾನವಿಲ್ಲ. ಸಾಕಷ್ಟು ಹಣವಿದ್ದರೂ ಅಸಮಧಾನ, ಕಲಹ ಮತ್ತು ಅತೃಪ್ತಿ ಇರುತ್ತದೆ. ಇದು ನಿಮ್ಮ ವಿಷಯದಲ್ಲಿ ಹೀಗಾಗಬೇಕಿಲ್ಲ. ನಿಮ್ಮ ಕೆಲಸದ ಪ್ರತಿಫಲವನ್ನು ನೀವು ಉಣ್ಣುವಿರಿ, ಆನಂದಿಸುವಿರಿ, ಹರ್ಷಿಸುವಿರಿ ಎಂಬದಾಗಿ ಕರ್ತನಲ್ಲಿ ನೀವು ಭರವಸವಿಡಿರಿ!

# 7
# ಹೊಸ ಜಗತ್ತಿನಲ್ಲಿ ಕೆಲಸ ಮಾಡುವುದು

**ಯೆಶಾಯ 65:17-25**

17 ಇಗೋ, ನೂತನಾಕಾಶಮಂಡಲವನ್ನೂ ನೂತನ ಭೂಮಂಡಲವನ್ನೂ ಸೃಷ್ಟಿಸುವೆನು;
ಮೊದಲಿದ್ದದ್ದನ್ನು ಯಾರೂ ಜ್ಞಾಪಿಸಿಕೊಳ್ಳರು, ಅದು ನೆನಪಿಗೆಬಾರದು.
18 ನಾನು ಮಾಡುವ ಸೃಷ್ಟಿಕಾರ್ಯದಲ್ಲಿಯೇ ಹರ್ಷಗೊಂಡು ಸದಾ ಉಲ್ಲಾಸಿಸಿರಿ;
ಆಹಾ, ನಾನು ಯೆರೂಸಲೇಮನ್ನು ಉಲ್ಲಾಸದ ನಿವಾಸವನ್ನಾಗಿಯೂ ಅದರ ಜನರನ್ನು
ಹರ್ಷಭರಿತರನ್ನಾಗಿಯೂ ಮಾಡುವೆನು.
19 ನಾನೂ ಯೆರೂಸಲೇಮನ್ನು ದೃಷ್ಟಿಸುತ್ತಾ ಉಲ್ಲಾಸಿಸುವೆನು, ಅದರ ಜನರನ್ನು ಈಕ್ಷಿಸುತ್ತಾ
ಹರ್ಷಗೊಳ್ಳುವೆನು. ರೋದನಶಬ್ದವೂ ಪ್ರಲಾಪಧ್ವನಿಯೂ ಅಲ್ಲಿ ಇನ್ನು ಕೇಳಿಸವು.
20 ಕೆಲವು ದಿವಸ ಮಾತ್ರ ಬದುಕತಕ್ಕ ಕೂಸಾಗಲಿ ವಯಸ್ಸಾಗದೆ ಮುದುಕನಾದವನಾಗಲಿ
ಅಲ್ಲಿ ಇರುವದಿಲ್ಲ; ಯುವಕನು ನೂರು ವರುಷದೊಳಗೆ ಸಾಯನು, ಪಾಪಿಷ್ಠನಿಗೂ ನೂರು
ವರುಷದೊಳಗೆ ಶಾಪತಗಲದು.
21 ಅಲ್ಲಿನ ಜನರು ತಾವು ಕಟ್ಟಿದ ಮನೆಗಳಲ್ಲಿ ತಾವೇ ವಾಸಿಸುವರು, ತಾವು ಮಾಡಿದ ತೋಟಗಳ
ಫಲವನ್ನು ತಾವೇ ಅನುಭವಿಸುವರು.
22 ಒಬ್ಬನು ಕಟ್ಟಿದ ಮನೆಯಲ್ಲಿ ಬೇರೊಬ್ಬನು ವಾಸಿಸನು; ಒಬ್ಬನು ಮಾಡಿದ ತೋಟದ ಫಲವು
ಇನ್ನೊಬ್ಬನಿಗೆ ವಶವಾಗದು; ನನ್ನ ಜನರ ಆಯುಸ್ಸು ವೃಕ್ಷದ ಆಯುಸ್ಸಿನಂತಿರುವದು; ನನ್ನ
ಆಪ್ತರು ತಮ್ಮ ಕೈಕೆಲಸದ ಆದಾಯವನ್ನು ಪೂರಾ ಅನುಭವಿಸುವರು.
23 ಅವರು ವ್ಯರ್ಥವಾಗಿ ದುಡಿಯರು, ಅವರಿಗೆ ಹುಟ್ಟುವ ಮಕ್ಕಳು ಘೋರ ವ್ಯಾಧಿಗೆ
ಗುರಿಯಾಗರು. ಅವರು ಯೆಹೋವನ ಆಶೀರ್ವಾದವನ್ನು ಹೊಂದಿದವರ ಸಂತಾನವಷ್ಟೆ; ಅವರ
ಸಂತತಿಯವರು ಅವರೊಂದಿಗೆ ಬಹುದಿನವಿರುವರು.
24 ಆಗ ಅವರು ಬೇಡುವದರೊಳಗೆ ಸದುತ್ತರವನ್ನು ದಯಪಾಲಿಸುವೆನು; ಅವರು
ಹೇಳುತ್ತಿರುವಾಗಲೇ ಕೇಳುವೆನು.
25 ತೋಳವು ಕುರಿಯ ಸಂಗಡ ಮೇಯುವದು, ಸಿಂಹವು ಎತ್ತಿನಂತೆ ಹುಲ್ಲು ತಿನ್ನುವದು. ಹಾವಿಗೆ
ದೂಳೇ ಆಹಾರವಾಗುವದು. ನನ್ನ ಪರಿಶುದ್ಧ ಪರ್ವತದಲ್ಲೆಲ್ಲಾ ಯಾರೂ ಕೇಡುಮಾಡುವದಿಲ್ಲ,
ಯಾರೂ ಹಾಳುಮಾಡುವದಿಲ್ಲ ಎಂದು ಯೆಹೋವನು ಅನ್ನುತ್ತಾನೆ.

**ದಾನಿಯೇಲ 7:13,14,18, 22,27**

13 ನಾನು ಕಂಡ ರಾತ್ರಿಯ ಕನಸಿನಲ್ಲಿ ಇಗೋ, ಮನುಷ್ಯಕುಮಾರನಂತಿರುವವನು ಆಕಾಶದ
ಮೇಘಗಳೊಂದಿಗೆ ಬಂದು ಆ ಮಹಾವೃದ್ಧನನ್ನು ಸಮೀಪಿಸಿದನು, ಅವನನ್ನು ಆತನ ಸನ್ನಿಧಿಗೆ
ತಂದರು.
14 ಸಕಲಜನಾಂಗ ಕುಲಭಾಷೆಗಳವರು ಅವನನ್ನು ಸೇವಿಸಲೆಂದು ಅವನಿಗೆ ದೊರೆತನವೂ

**ಘನತೆಯೂ ರಾಜ್ಯವೂ ಕೊಡೋಣವಾದವು; ಅವನ ಆಳಿಕೆಯು ಅಂತ್ಯವಿಲ್ಲದ್ದು, ಶಾಶ್ವತವಾದದ್ದು; ಅವನ ರಾಜ್ಯವು ಎಂದಿಗೂ ಅಳಿಯದು.**

**18 ಆದರೆ ರಾಜ್ಯವು ಪರಾತ್ಪರನ ಭಕ್ತರಿಗೆ ಲಭಿಸುವದು, ಅವರೇ ಅದನ್ನು ತಲತಲಾಂತರಕ್ಕೂ ಶಾಶ್ವತವಾಗಿ ಅನುಭವಿಸುವರು ಎಂದು ಆ ವಿಷಯಗಳ ತಾತ್ಪರ್ಯವನ್ನು ವಿವರಿಸಿ ತಿಳಿಸಿದನು.**

**22 ಮಹಾವೃದ್ಧನು ಅಯ್ತಂದು ಪರಾತ್ಪರನ ಭಕ್ತರಿಗಾಗಿ ನ್ಯಾಯತೀರಿಸಿ ಅವರಿಗೆ ರಾಜ್ಯವನ್ನು ದೊರಕಿಸುವ ತನಕ ಅವರನ್ನು ಗೆಲ್ಲುತ್ತಾ ಬಂದು ಕಣ್ಣುಳ್ಳದ್ದಾಗಿ ಬಾಯಿಂದ ಬಡಾಯಿಕೊಚ್ಚಿಕೊಳ್ಳುತ್ತಾ ಮಿಕ್ಕ ಕೊಂಬುಗಳಿಗಿಂತ ಬಿರಸಾಗಿ ನೋಡುತ್ತಾ ಇತ್ತೋ ಆ ಕೊಂಬಿನ ವಿಷಯವಾಗಿಯೂ ಸತ್ಯಾರ್ಥವನ್ನು ತಿಳಿದುಕೊಳ್ಳಬೇಕೆಂದು ಅಪೇಕ್ಷಿಸಿ ವಿಚಾರಿಸಿದೆನು.**

**27 ಆಗ ಅವನ ರಾಜ್ಯಪ್ರಭುತ್ವಗಳೂ ಸಮಸ್ತ ಭೂಮಂಡಲದಲ್ಲಿನ ರಾಜ್ಯಗಳ ಮಹಿಮೆಯೂ ಪರಾತ್ಪರನ ಭಕ್ತಜನರಿಗೆ ಕೊಡೋಣವಾಗುವವು; ಆತನ ರಾಜ್ಯವು ಶಾಶ್ವತರಾಜ್ಯ; ಸಕಲ ದೇಶಾಧಿಪತಿಗಳು ಆತನಿಗೆ ಅಧೀನರಾಗಿ ಸೇವೆಮಾಡುವರು ಎಂದು ಹೇಳಿದನು.**

**ಪ್ರಕಟಣೆ 2:25-27**

**25 ನಿಮಗಿರುವದನ್ನು ನಾನು ಬರುವ ತನಕ ಬಿಗಿಯಾಗಿ ಹಿಡಿದುಕೊಂಡಿರಬೇಕೆಂಬ ಅಪ್ಪಣೆಯನ್ನೇ ಹೊರತು ಮತ್ತೊಂದು ಭಾರವನ್ನು ನಿಮ್ಮ ಮೇಲೆ ಹಾಕುವದಿಲ್ಲವೆಂಬದೇ.**
**26 ಯಾವನು ಜಯಶಾಲಿಯಾಗಿದ್ದು ನನಗೆ ಮೆಚ್ಚಿಕೆಯಾದ ಕೃತ್ಯಗಳನ್ನು ಕಡೇವರೆಗೂ ನಡಿಸುತ್ತಾನೋ ಅವನಿಗೆ ನಾನು ನನ್ನ ತಂದೆಯಿಂದ ಹೊಂದಿದ ಅಧಿಕಾರದಂತೆ ಜನಾಂಗಗಳ ಮೇಲೆ ಅಧಿಕಾರವನ್ನು ಕೊಡುವೆನು.**
**27 ಅವನು ಕಬ್ಬಿಣದ ಕೋಲಿನಿಂದ ಅವರನ್ನು ಆಳುವನು; ಮಣ್ಣಿನ ಮಡಿಕೆಗಳು ಒಡೆಯುವಂತೆ ಅವರ ಬಲ ಮುರಿದು ಹೋಗುವದು.**

ಪರಲೋಕ ಮತ್ತು ನಿತ್ಯತ್ವ ಹೇಗಿರುತ್ತದೆ ಎಂಬುದಕ್ಕೆ ನಮ್ಮಲ್ಲಿ ಅನೇಕರಿಗೆ ವಿಭಿನ್ನ ಆಲೋಚನೆಗಳಿದೆ. ನಮ್ಮ ಪರಲೋಕ ಭವನದ ಒಳಗೆ ಮತ್ತು ಹೊರಗೆ ಮೋಡದ ಮೇಲೆ ತೇಲುವದು ಮತ್ತು ದೇವದೂತರೊಂದಿಗೆ ದೇವರ ಸ್ತುತಿಯನ್ನು ಹಾಡುತ್ತಾ ನಿತ್ಯಕ್ಕೂ ರಜಾ ದಿನದ ಒಂದು ಸಮಯವನ್ನು ನಿತ್ಯತ್ವ ಎಂಬುದಾಗಿ ನಮ್ಮಲ್ಲಿ ಕೆಲವರು ಆಲೋಚಿಸುತ್ತಾರೆ! ಹೀಗಿದ್ದರೂ, ಮುಂಬರುವ ಲೋಕದ ಬಗ್ಗೆ ಏನನ್ನು ನಿರೀಕ್ಷಿಸಬಹುದು ಎಂದು ಸತ್ಯವೇದವು ಕೆಲವು ನಿರ್ಧಿಷ್ಟವಾದ ಸಂಗತಿಗಳನ್ನು ಪ್ರಕಟಿಸುತ್ತದೆ. ಯೆಶಾಯನ ವಾಕ್ಯಭಾಗವು, ಒಮ್ಮೆ ಹೊಸ ಆಕಾಶಗಳು ಮತ್ತು ಭೂಮಿಯು ಅಸ್ತಿತ್ವಕ್ಕೆ ಬಂದ ಮೇಲೆ, ದೇವರ ಜನರು ಇನ್ನೂ ಸಹ ಮನೆಗಳನ್ನು ನಿರ್ಮಿಸುವದನ್ನು ಮತ್ತು ದ್ರಾಕ್ಷಿತೋಟಗಳನ್ನು ನೆಡುವದನ್ನು ನಮಗೆ ತೋರಿಸುತ್ತದೆ. ನಾವು ಕೆಲಸ ಮಾಡುವವರಾಗಿದ್ದೇವೆ ಮತ್ತು ನಮ್ಮ ಕೈಕೆಲಸಗಳನ್ನು ಆನಂದಿಸಲಿದ್ದೇವೆ. ಹಾಗಾಗಿ, ಹೊಸ ಲೋಕದಲ್ಲೂ ಸಹ ನಾವು “ಕೆಲಸ” ಮಾಡಲಿದ್ದೇವೆ!

ದೇವಜನರು ಭೂಮಿಯ ಮೇಲೆ ಕ್ರಿಸ್ತನ ರಾಜ್ಯ ಮತ್ತು ಆಳ್ವಿಕೆಯನ್ನು ನಿರ್ವಹಿಸಲು ಸಹಾಯ ಮಾಡುತ್ತಾರೆ ಎಂದು ದಾನಿಯೇಲ ಮತ್ತು ಪ್ರಕಟನೆಯ ವಾಕ್ಯಭಾಗಗಳು ನಮಗೆ ತೋರಿಸುತ್ತವೆ. ಕ್ರಿಸ್ತನು ಬಂದು ಆತನ ರಾಜ್ಯವನ್ನು ಸ್ಥಾಪಿಸಿದಾಗ ದೇವಜನರು ಆತನ ಆಡಳಿತವನ್ನು ನಿರ್ವಹಿಸುವುದರಲ್ಲಿ ನಿರತರಾಗಿರುತ್ತಾರೆ. ಹಾಗಾಗಿ, ನಾವು ಶಾಶ್ವತವಾಗಿ ಕೆಲಸ ಮಾಡುವವರಾಗಿದ್ದೇವೆ ಎಂದು ತೋರುತ್ತದೆ! ನಾವು ಕೆಲಸವನ್ನು ಆನಂದಿಸೋಣ. ಇದು ದೇವರು-ರೂಪಿಸಿದ, ದೇವರು-ನೇಮಿಸಿದ ಚಟುವಟಿಕೆ. ಭೂಮಿಯ ಮೇಲೆ ಆತನ ಉದ್ದೇಶಗಳನ್ನು ಮುಂದುವರೆಸಲು ನಿಮ್ಮ ಕೆಲಸವು ಒಂದು ವಾಹನವಾಗಿರಲಿ.

# ನಿಮ್ಮನ್ನು ಪ್ರೀತಿಸುವ ದೇವರನ್ನು ನೀವು ತಿಳಿದಿದ್ದೀರೋ?

ಸುಮಾರು ಎರಡು ಸಾವಿರ ವರ್ಶಗಳ ಹಿಂದೆ, ದೇವರು ಮನುಷ್ಯನಾಗಿ ಭೂಲೋಕಕ್ಕೆ ಬಂದನು. ಆತನ ಹೆಸರು ಯೇಸು. ಆತನು ಪಾಪರಹಿತ ಜೀವಿತ ನಡೆಸಿದನು. ಯೇಸುವು ಶರೀರಧಾರಿಯಾದ ದೇವರಾಗಿದ್ದದರಿಂದ ಆತನು ಹೇಳಿದ್ದರಲ್ಲಿ, ಮಾಡಿದ್ದರಲ್ಲಿ ದೇವರನ್ನು ನಮಗೆ ಪ್ರಚುರಪಡಿಸಿದ್ದಾನೆ. ಆತನು ಆಡಿದ ಮಾತುಗಳು ಸ್ವತಃ ದೇವರ ಮಾತುಗಳೇ ಆಗಿದ್ದವು. ಆತನು ಮಾಡಿದ ಎಲ್ಲಾ ಕಾರ್ಯಗಳು ದೇವರ ಕಾರ್ಯಗಳೇ. ಯೇಸು ಭೂಲೋಕದಲ್ಲಿ ಅನೇಕ ಕಾರ್ಯಗಳನ್ನು ಮಾಡಿದನು. ರೋಗಗಳಲ್ಲಿ ನರಳುತ್ತಿದ್ದವರನ್ನು ಆತನು ಗುಣಪಡಿಸಿದನು. ಕುರುಡರಿಗೆ ಕಣ್ಣುಕೊಟ್ಟನು. ಕಿವುಡರನ್ನು ಮುಟ್ಟಿ ಕೇಳುವಂತೆ ಮಾಡಿದನು. ಹಸಿದ 5000 ಜನರಿಗೆ ಐದು ರೊಟ್ಟಿ, ಎರಡು ಮೀನುಗಳಿಂದ ಉಣ್ಣಲು ಬಡಿಸಿದನು. ಸಮುದ್ರದ ಮೇಲೆ ನಡೆದನು, ಸಮುದ್ರದ ಬಿರುಗಾಳಿಯನ್ನು ಶಾಂತಗೊಳಿಸಿದನು, ಇನ್ನು ಅನೇಕ ಮಹತ್ಕಾರ್ಯಗಳನ್ನು ಮಾಡಿದನು.

**ಈ ಎಲ್ಲಾ ಕಾರ್ಯಗಳು ದೇವರು ಒಳ್ಳೆಯ ದೇವರಾಗಿದ್ದಾನೆ, ಜನರೆಲ್ಲರೂ, ಆರೋಗ್ಯದಿಂದಲೂ, ಸಂತೋಷದಿಂದಲೂ ಕ್ಷೇಮದಿಂದಲೂ ಇರಬೇಕೆಂದು ಆತನು ಬಯಸುತ್ತಾನೆ. ಆತನು ಜನರ ಎಲ್ಲಾ ಕೊರತೆಗಳನ್ನು ಪೂರೈಸುತ್ತಾನೆ ಮತ್ತು ನೀಗಿಸುತ್ತಾನೆ ಎಂದು ಪ್ರಕಟಿಸುತ್ತಾನೆ.**

ಆದುದರಿಂದ ದೇವರು ಯಾಕೆ ಮನುಷ್ಯನಾಗಿ ಈ ಲೋಕಕ್ಕೆ ಬರಲು ತೀರ್ಮಾನಿಸಿದನು? ಯೇಸುವು ಯಾಕೆ ಬಂದನು?

ನಾವೆಲ್ಲರೂ ಪಾಪ ಮಾಡಿದ್ದೇವೆ. ದೇವರ ದೃಷ್ಟಿಯಲ್ಲಿ ಸರಿ ಕಾಣದ ಅನೇಕ ಕಾರ್ಯಗಳನ್ನು ಮಾಡಿದ್ದೇವೆ. ಪಾಪವು ಅದರ ಕಾರ್ಯಫಲವನ್ನು ಹೊಂದಿದೆ. ಪಾಪವು ದೇವರಿಗೂ, ನಮಗೂ ನಡುವೆಯಿರುವ ಕದಲಿಸಲಾಗದ ಅಡ್ಡ ಗೋಡೆಯಾಗಿದೆ. ಪಾಪವು ನಮ್ಮನ್ನು ದೇವರಿಂದ ಬೇರ್ಪಡಿಸುತ್ತದೆ. ನಮ್ಮನ್ನು ಸೃಷ್ಟಿಸಿದ ದೇವರನ್ನು ತಿಳಿಯಲು ಮತ್ತು ಅರ್ಥಭರಿತ ಸಂಬಂಧವನ್ನು ಆತನೊಂದಿಗೆ ಹೊಂದಿಕೊಳ್ಳುವದನ್ನು ಪಾಪವು ತಡೆದು ಹಿಡಿಯುತ್ತದೆ. ಆದುದರಿಂದ ನಮ್ಮಲ್ಲಿ ಅನೇಕರು ನಿರರ್ಥಕವಾದ ಬೇರೆ ವಿಷಯಗಳಿಂದ ಈ ಶೂನ್ಯವನ್ನು ತುಂಬಿಸಲು ಪ್ರಯತ್ನಿಸುತ್ತೇವೆ.

ನಮ್ಮ ಪಾಪದ ಮತ್ತೊಂದು ಫಲವೇನೆಂದರೆ ನಮ್ಮನ್ನು ದೇವರಿಂದ ನಿತ್ಯಕ್ಕೂ ಬೇರ್ಪಡಿಸುತ್ತದೆ. ದೇವರ ನ್ಯಾಯಸ್ಥಾನದಲ್ಲಿ ಪಾಪದ ಶಿಕ್ಷೆ ಮರಣವಾಗಿದೆ. ಮರಣವು ನಮ್ಮನ್ನು ನರಕದಲ್ಲಿ ದೇವರಿಂದ ಶಾಶ್ವತವಾಗಿ ಅಗಲಿಸುತ್ತದೆ ಅಥವಾ ದೂರ ಸರಿಯುವಂತೆ ಮಾಡುತ್ತದೆ.

ಆದರೆ ನಮಗಿರುವ ಶುಭ ಸಮಾಚಾರವೇನೆಂದರೆ ನಾವು ಪಾಪಗಳಿಂದ ಸ್ವತಂತ್ರರಾಗಬಹುದು ಮತ್ತು ದೇವರೊಂದಿಗೆ ನವೀಕೃತಗೊಳ್ಳಬಹುದು. ಸತ್ಯವೇದವು ***"ಪಾಪವು ಕೊಡುವ ಸಂಬಳ ಮರಣ, ದೇವರ ಉಚಿತಾರ್ಥವರವು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರುವ ನಿತ್ಯ ಜೀವ" ಎಂದು ಹೇಳುತ್ತದೆ*** **(ರೋಮಾಪುರದವರಿಗೆ 6:23).** ಯೇಸು ಪ್ರಪಂಚದ ಪಾಪಗಳಿಗೆ, ಶಿಲುಬೆಯ ಮೇಲೆ ಪ್ರಾಣಕೊಡುವ ಮೂಲಕ ಪಾಪದ ವಶದಿಂದ ಎಲ್ಲರನ್ನು ಬಿಡುಗಡೆ ಮಾಡಿದ್ದಾನೆ. ಮೂರನೇ ದಿನದಲ್ಲಿ ಜೀವದಿಂದ ಎದ್ದು

ಬಂದಿದ್ದಾನೆ. ಜೀವಿಸುವವನಾಗಿ ಅನೇಕರಿಗೆ ಕಾಣಿಸಿಕೊಂಡನು ಮತ್ತು ಪರಲೋಕಕ್ಕೆ ಏರಿ ಹೋದನು.

ದೇವರು, ಕರುಣೆ ಮತ್ತು ಪ್ರೀತಿಯುಳ್ಳ ದೇವರು. ಯಾವನಾದರೂ ನರಕದಲ್ಲಿರಬೇಕೆಂದು ಆತನು ಬಯಸುವ ದೇವರಲ್ಲ. ಆತನು, ಇಡೀ ಮನುಷ್ಯ ಕುಲವು ಪಾಪದ ಬಂಧನದಿಂದ ಸ್ವತಂತ್ರಗೊಳ್ಳಲು, ಪಾಪದ ಶಾಶ್ವತ ದೋಷ ಫಲಗಳಿಂದ ಬಿಡುಗಡೆ ಹೊಂದುವಂತೆ, ಮಾರ್ಗ ಮಾಡಿಕೊಡಲು ಬಂದನು. ಆತನು ಪಾಪಿಗಳನ್ನು ರಕ್ಷಿಸಲು ಬಂದನು. ನನ್ನಂತೆಯೇ, ಜನರನ್ನು ಪಾಪದಿಂದ ನಿತ್ಯತ್ವದ ಮರಣದಿಂದ ಬಿಡುಗಡೆ ಮಾಡಲು ಬಂದನು.

ಈ ಉಚಿತವಾದ ಪಾಪಗಳ ಕ್ಷಮಾಪಣೆಯನ್ನು ಪಡೆಯಬೇಕಾದರೆ ನಾವು ಒಂದೇ ಒಂದು ವಿಷಯವನ್ನು ಮಾಡಬೇಕೆಂದು ಸತ್ಯವೇದ ಹೇಳುತ್ತದೆ - ನೀನು ಯೇಸು ಕ್ರಿಸ್ತನು ಶಿಲುಬೆಯ ಮೇಲೆ ಮಾಡಿದ್ದೆಲ್ಲವನ್ನು ಅಂಗೀಕರಿಸಿಕೊಳ್ಳಬೇಕು. ಸಂಪೂರ್ಣ, ಯಥಾರ್ಥ ಹೃದಯದಿಂದ ಯೇಸುವನ್ನು ನಂಬಬೇಕು.

***"ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನ ಹೆಸರಿನ ಮೂಲಕವಾಗಿ ಪಾಪ ಪರಿಹಾರವನ್ನು ಹೊಂದುವನು ..."*** **(ಅಪೋಸ್ತಲರ ಕೃತ್ಯಗಳು 10:43).**

***"ನೀನು ಯೇಸುವನ್ನೇ ಕರ್ತನೆಂದು ಬಾಯಿಯಿಂದ ಅರಿಕೆ ಮಾಡಿಕೊಂಡು ದೇವರು ಆತನನ್ನು ಸತ್ತವರೊಳಗೆ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವದು ಎಂಬದು"*** **(ರೋಮಾಪುರದವರಿಗೆ 10:9).**

ನೀವು ಸಹ ಯೇಸು ಕ್ರಿಸ್ತನನ್ನು ನಂಬಿದರೆ ನಿಮ್ಮ ಪಾಪಗಳಿಗೆ ಕ್ಷಮಾಪಣೆಯನ್ನು ಮತ್ತು ಪಾಪ ಪರಿಹಾರಗಳನ್ನು ಹೊಂದಿಕೊಳ್ಳಬಹುದು.

ಯೇಸುವಿನ ಮೇಲೆ ನಂಬಿಕೆಯಿಡಲು, ಮತ್ತು ಆತನು ನಿಮಗೋಸ್ಕರ ಶಿಲುಬೆಯ ಮೇಲೆ ಮಾಡಿದ ಕಾರ್ಯಗಳಲ್ಲಿ ನಂಬಿಕೆಯಿಟ್ಟು ತೀರ್ಮಾನ ತೆಗೆದುಕೊಳ್ಳಲು ಈ ಮುಂದಿನ ಪ್ರಾರ್ಥನೆಯು ಸಹಾಯ ಮಾಡುವದು. ಯೇಸು ಕ್ರಿಸ್ತನು ನಿಮಗಾಗಿ ಏನು ಮಾಡಿದನೆಂದೂ ಮತ್ತು ನಿಮ್ಮ ಪಾಪಗಳ ಕ್ಷಮಾಪಣೆ ಮತ್ತು ಶುದ್ಧಿಕರಣವನ್ನು ಹೊಂದಿಕೊಳ್ಳುವಂತೆಯೂ ಮತ್ತು ನಿಮ್ಮ ಅಂಗೀಕಾರವನ್ನು ತೋರಿಸುವಂತೆಯೂ ಸಹಾಯ ಮಾಡುತ್ತದೆ. ಈ ಪ್ರಾರ್ಥನೆ ಬರೀ ಮಾರ್ಗದರ್ಶಿಯಾಗಿದೆ. ನಿಮ್ಮ ಸ್ವಂತ ಮಾತುಗಳಲ್ಲಿ ಪ್ರಾರ್ಥಿಸಬಹುದು.

*ಪ್ರೀಯ ಕರ್ತನಾದ ಯೇಸುವೇ, ಇಂದು ನೀನು ನನಗಾಗಿ ಶಿಲುಬೆ ಮೇಲೆ ಮಾಡಿದನ್ನು ಅರ್ಥಮಾಡಿಕೊಂಡಿದ್ದೇನೆ. ನೀನು ನನಗಾಗಿ ಪ್ರಾಣ ಕೊಟ್ಟಿ. ನನಗಾಗಿ ನಿನ್ನ ಪವಿತ್ರವಾದ ರಕ್ತ ಸುರಿಸುವ ಮೂಲಕ ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದಿ, ಇದರಿಂದ ನಾನು ಕ್ಷಮಿಸಲ್ಪಟ್ಟೆನು. ಯಾರು ಯಾರು ಆತನ ಮೇಲೆ ನಂಬಿಕೆಯಿಟ್ಟರೊ, ಅವರು ಪಾಪಗಳ ಕ್ಷಮೆಯನ್ನು ಹೊಂದಿದರು ಎಂದು ಸತ್ಯವೇದವು ನನಗೆ ತಿಳಿಸುತ್ತದೆ.*

*ಈ ದಿನ ನಾನು ನಿನ್ನನ್ನು ನಂಬುತ್ತೇನೆ. ನೀನು ನನಗಾಗಿ ಸಾಯುವದರ ಮೂಲಕವೂ, ಮೂರನೇ ದಿನದಲ್ಲಿ ಜೀವಿತನಾಗಿ ಎದ್ದು ಬಂದದ್ದರ ಮೂಲಕವೂ*

*ನೀನು ಮಾಡಿದನ್ನು ಅಂಗೀಕರಿಸಿಕೊಳ್ಳುತ್ತೇನೆ. ನನ್ನ ಒಳ್ಳೆಯ ಕೆಲಸಗಳಿಂದಲೂ, ಬೇರೊಬ್ಬನಿಂದಲೂ ನನ್ನನ್ನು ರಕ್ಷಿಸಿಕೊಳ್ಳಲು ಆಗುವದಿಲ್ಲ. ನಾನು ನನ್ನ ಪಾಪಗಳ ಕ್ಷಮಾಪಣೆ ಸಂಪಾದಿಸಲು ಸಾಧ್ಯವಿಲ್ಲ.*

*ಈ ದಿನ ನಾನು ನನ್ನ ಹೃದಯದಿಂದ ನಂಬಿ, ನನ್ನ ಬಾಯಿಯಿಂದ ನೀನು ನನಗಾಗಿ ಮರಣವನ್ನು ಹೊಂದಿದೆ, ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದ್ದಿ, ಮರಣದಿಂದ ಜೀವಿತನಾಗಿ ಎದ್ದು ಬಂದಿದ್ದಿ ಎಂಬ ನಿನ್ನಲ್ಲಿ ಇಟ್ಟ ನಂಬಿಕೆಯಿಂದ, ನನ್ನ ಪಾಪಗಳ ಕ್ಷಮಾಪಣೆ, ಶುದ್ಧಿಕರಣ ಪಡೆದುಕೊಂಡೆ ಎಂದು ಹೇಳುತ್ತೇನೆ.*

*ಯೇಸುವೇ ನಿನಗೆ ವಂದನೆಗಳು, ನಿನ್ನನ್ನು ಪ್ರೀತಿಸಲು ಸಹಾಯ ಮಾಡು, ನಿನ್ನನ್ನು ಇನ್ನೂ ತಿಳಿಯಲೂ ಮತ್ತು ನಿನಗೆ ನಂಬಿಗಸ್ತನಾಗಿರಲು ಸಹಾಯ ಮಾಡು.*

*ಆಮೇನ್.*

# ಆಲ್ ಪೀಪಲ್ಸ್ ಸಭೆಯ ಬಗ್ಗೆ

ನಮ್ಮ ಬೆಂಗಳೂರು ನಗರಕ್ಕೆ ಉಪ್ಪು ಮತ್ತು ಬೆಳಕು ಆಗಿರಬೇಕೆಂದು ಮತ್ತು ಭಾರತ, ಪ್ರಪಂಚದ ಎಲ್ಲಾ ರಾಷ್ಟ್ರಗಳಿಗೂ ಧ್ವನಿ ಆಗಿರಬೇಕೆಂದು ಆಲ್ ಪೀಪಲ್ಸ್ ಸಭೆಯ ದರ್ಶನವಾಗಿದೆ.

ಆಲ್ ಪೀಪಲ್ಸ್ ಸಭೆಯು **ಯೇಸು ಕ್ರಿಸ್ತನನ್ನು ಪ್ರೀತಿಸುವ, ವಾಕ್ಯದ ಮೇಲೆ ಕೇಂದ್ರಿಕರಿಸಲ್ಪಟ್ಟ, ಆತ್ಮನಿಂದ ತುಂಬಿಸಲ್ಪಟ್ಟ,** ಒಂದು ಸಜ್ಜುಗೊಳಿಸುವ ಕೇಂದ್ರ, ಸೇವಾ ತಳಹದಿಯ ಮತ್ತು ದೇಶಗಳನ್ನು ಸಂಧಿಸುವ ಒಂದು ಕುಟುಂಬ ಸಭೆಯಾಗಿದೆ.

- ಒಂದು **ಕುಟುಂಬ ಸಭೆಯಾಗಿ,** ನಾವು ಕ್ರಿಸ್ತನ ಕೇಂದ್ರಿತ ಸಹಭಾಗಿತ್ವ, ದೇವರ ಸಭೆಯಂತೆ ನಾವು ಒಬ್ಬರಿಗೊಬ್ಬರು ಪ್ರೀತಿಯಲ್ಲಿ ಪರಸ್ಪರ ಕಾಳಜಿ ಮತ್ತು ಸೇವೆ ಮಾಡುವಂತಹ ಒಂದು ಸಮುದಾಯವಾಗಿ ಒಟ್ಟಿಗೆ ಬೆಳೆಯುತ್ತೇವೆ.
- ಒಂದು **ಸಜ್ಜುಗೊಳಿಸುವ ಕೇಂದ್ರವಾಗಿ,** ನಾವು ಪ್ರತಿ ವಿಶ್ವಾಸಿಯು ವಿಜಯಶಾಲಿಯಾಗಿ ಜೀವಿಸಲು, ಕ್ರಿಸ್ತನಂತೆ ಪ್ರಬುದ್ಧರಾಗಿ ಮತ್ತು ಅವರ ಜೀವಿತಗಳಿಗಾಗಿ ದೇವರ ಉದ್ದೇಶಗಳನ್ನು ನೆರವೇರಿಸಲು ಸಜ್ಜುಗೊಳಿಸುತ್ತೇವೆ ಮತ್ತು ಅಧಿಕಾರ ನೀಡುತ್ತೇವೆ.
- ಒಂದು **ಸೇವಾ ನೆಲೆಯಾಗಿ,** ದೇವರ ವಾಕ್ಯದ ಮೂಲಕವಾಗಿ ಯೇಸು ಕ್ರಿಸ್ತನ ಸಂಪೂರ್ಣ ಸುವಾರ್ತೆಯೊಂದಿಗೆ ಮತ್ತು ಪವಿತ್ರಾತ್ಮದ ಬಲದ ಅಪ್ರಾಕೃತ ತೋರ್ಪಡಿಸುವಿಕೆಗಳೊಡನೆ ನಮ್ಮ ನಗರ, ದೇಶ ಮತ್ತು ದೇಶಗಳನ್ನು ಆಶೀರ್ವದಿಸಲು ಅರ್ಥಪೂರ್ಣ ಸೇವೆಯಲ್ಲಿ ನಾವು ತೊಡಗುತ್ತೇವೆ.
- ಒಂದು **ಪ್ರಪಂಚವನ್ನು ಸಂಧಿಸುವವರಾಗಿ,** ದೇವರ ರಾಜ್ಯಕ್ಕಾಗಿ ತಮ್ಮ ಪ್ರದೇಶಗಳ ಮೇಲೆ ಪ್ರಭಾವ ಬೀರುವ ದೈವಿಕ ನಾಯಕರು ಮತ್ತು ಆತ್ಮಭರಿತ ಸಭೆಗಳನ್ನು ಪೋಷಿಸುವದರಿಂದ ಸ್ಥಳಿಯವಾಗಿ ಮತ್ತು ಜಾಗತಿಕವಾಗಿ ನಾವು ಸೇವೆ ಸಲ್ಲಿಸುತ್ತೇವೆ.

ಆಲ್ ಪೀಪಲ್ಸ್ ಸಭೆಯಲ್ಲಿ ನಾವು, ಆತನ ಪವಿತ್ರಾತ್ಮನ ಪ್ರಮಾಣೀಕರಣ ಮತ್ತು ರಾಜಿ ಹೊಂದದ, ಅಭಿಷೇಕ ಹೊಂದಿದ, ದೇವರ ವಾಕ್ಯವನ್ನು ಪರಿಪೂರ್ಣವಾಗಿ ಪ್ರಸ್ತುತ ಪಡಿಸುವ ಬದ್ಧತೆ ಹೊಂದಿದ್ದೇವೆ. ನಾವು ಒಳ್ಳೆಯ ಸಂಗೀತ, ಸೃಜ್ಜನಾತ್ಮಕ ಪ್ರಸ್ತುತಿ, ಪ್ರತಿಭಾವಂತ ಸಮರ್ಥನೆಗಳು, ಸಮಕಾಲೀನ ಸೇವಾ ತಂತ್ರಗಳು, ಇತ್ತೀಚಿನ ತಂತ್ರಜ್ಞಾನ ಮುಂತಾದವುಗಳು, ದೈವದತ್ತ ವಿಧಾನ ಹೊಂದಿದ ದೇವರ ವಾಕ್ಯವನ್ನು ಪವಿತ್ರಾತ್ಮನ ಸೂಚಕಕಾರ್ಯ, ಅದ್ಭುತಕಾರ್ಯ, ಮಹತ್ಕಾರ್ಯ ಮತ್ತು ಪವಿತ್ರಾತ್ಮನ ವರದಲ್ಲಿ ಸಾರುವದನ್ನು ಬದಲಿಸಲು ಸಾಧ್ಯವಿಲ್ಲವೆಂದು ನಂಬುತ್ತೇವೆ (1 ಕೊರಿಂಥದವರಿಗೆ 2:4,5; ಇಬ್ರಿಯರಿಗೆ 2:3,4). ಯೇಸು ನಮ್ಮ ಉದ್ದೇಶ, ದೇವರ ವಾಕ್ಯ ನಮ್ಮ ವಿಷಯ, ಪವಿತ್ರಾತ್ಮನ ಬಲ ನಮ್ಮ ಕ್ರಮ, ಜನರು ನಮ್ಮ ಅನುರಾಗ, ಕ್ರಿಸ್ತನ ಮಾದರಿಯ ಪ್ರೌಢತೆಯು ನಮ್ಮ ಗುರಿಯಾಗಿದೆ.

ಬೆಂಗಳೂರಿನ ಆಲ್ ಪೀಪಲ್ಸ್ ಸಭೆಯ ಮುಖ್ಯ ನೆಲೆಯೊಡನೆ ಭಾರತದಲ್ಲಿ ಅನೇಕ ಇತರ ಸಭೆಗಳನ್ನು ಹೊಂದಿದೆ. ಪ್ರಸಕ್ತವಾದ ಪಟ್ಟಿಯನ್ನು ಪಡೆಯಲು ಮತ್ತು ಆಲ್ ಪೀಪಲ್ಸ್ ಸಭೆಯ ಸ್ಥಳಗಳ ಬಗ್ಗೆ ಮಾಹಿತಿಯನ್ನು ಪಡೆದುಕೊಳ್ಳಲು, ನಮ್ಮ ವೆಬ್ ಸೈಟ್ ನ್ನು ಸಂಪರ್ಕಿಸಿರಿ. **apcwo.org/locations** ಅಥವಾ **contact@apcwo.org** ಗೆ ಇ-ಮೇಲ್ ಕಳುಹಿಸಿರಿ.

# ಉಚಿತ ಪ್ರಕಾಶನಗಳು

A Church in Revival
A Real Place Called Heaven
A Time for Every Purpose
Ancient Landmarks
Baptism in the Holy Spirit
Being Spiritually Minded and Earthly Wise
Biblical Attitude Towards Work
Breaking Personal and Generational Bondages
Change
Code of Honor
Divine Favor
Divine Order in the Citywide Church
Don’t Compromise Your Calling
Don’t Lose Hope
Equipping the Saints
Foundations (Track 1)
Fulfilling God’s Purpose for Your Life
Gifts of the Holy Spirit
Giving Birth to the Purposes of God
God Is a Good God
God’s Word—The Miracle Seed
How to Help Your Pastor
Integrity
Kingdom Builders
Laying the Axe to the Root
Living Life Without Strife
Marriage and Family
Ministering Healing and Deliverance
Offenses—Don’t Take Them
Open Heavens
Our Redemption
Receiving God’s Guidance
Revivals, Visitations and Moves of God
Shhh! No Gossip!
Speak Your Faith
The Conquest of the Mind
The Father’s Love
The House of God
The Kingdom of God
The Mighty Name of Jesus
The Night Seasons of Life
The Power of Commitment
The Presence of God
The Redemptive Heart of God
The Refiner’s Fire
The Spirit of Wisdom, Revelation and Power
The Wonderful Benefits of Praying in Tongues
Timeless Principles for the Workplace
Understanding the Prophetic
Water Baptism
We Are Different
Who We Are in Christ
Women in the Workplace
Work—Its Original Design

ಹೊಸ ಪುಸ್ತಕಗಳು ನಿಯಮಿತವಾಗಿ ಬಿಡುಗಡೆಗೊಳ್ಳುತ್ತವೆ. ಆಲ್ ಪೀಪಲ್ಸ್ ಸಭೆಯ ಕ್ರಿಸ್ತೀಯ ಉಚಿತ ಪುಸ್ತಕಗಳನ್ನು PDF ನಲ್ಲಿ, ಆಡಿಯೋ ಮತ್ತು ಇತರ ಸ್ವರೂಪಗಳಲ್ಲಿ ಡೌನ್ಲೋಡ್ ಮಾಡಲು ದಯವಿಟ್ಟು **apcwo.org/books** ನಿಂದ ಸಂಗ್ರಹಿಸಿರಿ. ಇವುಗಳಲ್ಲಿ ಅನೇಕ ಪುಸ್ತಕಗಳು ಇತರ ಭಾಷೆಗಳಲ್ಲೂ ಸಹ ದೊರೆಯುತ್ತವೆ. ಉಚಿತ ಆಡಿಯೋ ಮತ್ತು ವಿಡಿಯೋ ಸಂದೇಶಗಳು, ಪ್ರಸಂಗ ಟಿಪ್ಪಣಿಗಳು ಮತ್ತು ಇತರ ಉಚಿತ ಅಧ್ಯಯನ ಸಂಗ್ರಹಗಳಿಗಾಗಿ ದಯವಿಟ್ಟು **apcwo.org/sermons** ನ್ನು ಸಂಪರ್ಕಿಸಿರಿ.

# ಕ್ರಿಸಾಲಿಸ್ ಕೌನ್ಸೆಲಿಂಗ್

ಕ್ರಿಸಾಲಿಸ್ ಕೌನ್ಸೆಲಿಂಗ್ ಜನರು ಜೀವನದ ಸವಾಲುಗಳನ್ನು ಎದುರಿಸಲು ಮತ್ತು ಜಯಿಸಿ ಹೊರಬರಲು ಸಹಾಯ ಮಾಡಲು ವೈಯಕ್ತಿಕ ಸಲಹೆಯನ್ನು ನೀಡುತ್ತದೆ. ಕ್ರಿಸಾಲಿಸ್ ಕೌನ್ಸೆಲಿಂಗ, ತರಬೇತಿ ಪಡೆದ ವೃತ್ತಿಪರ ಮತ್ತು ಅನುಭವಿ ಕ್ರೈಸ್ತೀಯ ಸಲಹೆಗಾರರ ತಂಡವಾಗಿದೆ.

ನಮ್ಮ ಸೇವೆಗಳು ಎಲ್ಲಾ ವಯೋಮಾನದವರಿಗೆ ಮತ್ತು ವಿಶಾಲ ವ್ಯಾಪ್ತಿಯ ಜೀವನದ ಸವಾಲುಗಳ ಕುರಿತು ಸಂಬೋಧಿಸುವದಾಗಿದೆ.

| | |
|---|---|
| **ಹದಿಹರೆಯದವರು** | **ವರ್ತನೆಯ ಅಸ್ತವ್ಯಸ್ತತೆಗಳು** |
| **ವಯಕ್ತಿಕ ಹೊಂದಾಣಿಕೆಗಳು** | **ವ್ಯಕ್ತಿತ್ವ ಅಸ್ತವ್ಯಸ್ತತೆಗಳು** |
| **ಸಂಭಂದಿತ ಸವಾಲುಗಳು** | **ಮಾನಸಿಕ / ಭಾವನಾತ್ಮಕ ಸಮಸ್ಯೆಗಳು** |
| **ಶೈಕ್ಷಣಿಕ ಕಡಿಮೆ ಸಾಧನೆ** | **ಒತ್ತಡ / ಆಘಾತ** |
| **ಕೆಲಸಕ್ಕೆ ಸಂಭಂದಿಸಿದ ಸವಾಲುಗಳು** | **ಮಧುಪಾನ / ಮಾದಕವಸ್ತು ದುರುಪಯೋಗ** |
| **ಕುಟುಂಬ / ದಂಪತಿಗಳು: ವಿವಾಹಪೂರ್ವ, ವೈವಾಹಿಕ** | **ಆತ್ಮೀಕ ಸಮಸ್ಯೆಗಳು** |
| **ಪೋಷಕರು / ಮಕ್ಕಳು / ಒಡಹುಟ್ಟಿದವರು / ಗೆಳೆಯರು** | **ಜೀವನ ತರಬೇತಿ** |

ಕ್ರಿಸಾಲಿಸ್ ಕೌನ್ಸೆಲಿಂಗ ಸೇವೆಗಳು ಕೈಗೆಟಕುವ ಶುಲ್ಕಗಳು ಮತ್ತು ಸುಲಭವಾಗಿ ಪಡೆದುಕೊಳ್ಳಬಹುದಾಗಿದೆ.

ನಮ್ಮ ತರಬೇತಿ ಪಡೆದ ಸಲಹೆಗಾರರೊಂದಿಗೆ ನಿಮ್ಮ ನೇಮಕಾತಿಯನ್ನು ನಿಗದಿಪಡಿಸಲು:

**ವೆಬ್ಸೈಟ್: chrysalislife.org**
**ದೂರವಾಣಿ: +91-80-25452617** ಅಥವಾ ಟೋಲ್ - ಫ್ರೀ (ಭಾರತದೊಳಗೆ) **1-800-300-00998**
**ಇಮೆಲ್: counselor@chrysalislife.org**

ಕ್ರಿಸಾಲಿಸ್ ಆಲ್ ಪೀಪಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್ ರೀಚ್ ನ ಒಂದು ಸೇವೆಯಾಗಿದೆ.

# ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ

ಆಲ್ ಪೀಪಲ್ಸ್ ಸಭೆಯ ಸೇವಕರುಗಳು ಪ್ರಮುಖವಾಗಿ ಉತ್ತರ ಭಾರತದಲ್ಲಿ (ಅ) ನಾಯಕರುಗಳನ್ನು ಬಲಗೊಳಿಸುವದು, (ಆ) ಸೇವೆಗಾಗಿ ಯೌವ್ವನಸ್ಥರನ್ನು ತರಬೇತುಗೊಳಿಸುವದು, (ಇ) ಕ್ರಿಸ್ತನ ಅಂಗವನ್ನು ಕಟ್ಟುವದನ್ನು, ಬಹಳ ಮುಖ್ಯ ಗುರಿಯಾಗಿಸಿಕೊಂಡಿರುವ, ಭಾರತ ದೇಶದಾದ್ಯಂತ ತನ್ನ ಸ್ವಂತ ಎಲ್ಲೆ ಮೀರಿದ ಸ್ಥಳೀಯ ಸಭೆಯಾಗಿದೆ. ಯೌವ್ವನಸ್ಥರಿಗಾಗಿ ಅನೇಕ ತರಬೇತಿ ಅಧ್ಯಯನ ಸಂಕೀರ್ಣ, ಸಭಾಪಾಲಕರು ಮತ್ತು ಸಭಾ 'ಸೇವಕರ ಸಮಾವೇಶವನ್ನು' ವರ್ಷಪೂರ್ತಿ ನಡೆಸುವದು ಮತ್ತು ದೇವರ ವಾಕ್ಯದಲ್ಲಿ ಮತ್ತು ದೇವರಾತ್ಮನಲ್ಲಿ ವಿಶ್ವಾಸಿಗಳನ್ನು ಕಟ್ಟುವ ಉದ್ದೇಶದೊಡನೆ ಭಾರತ ದೇಶದ ಪ್ರಾದೇಶಿಕ ಭಾಷೆಗಳು ಮತ್ತು ಇಂಗ್ಲೀಷ್ ಭಾಷೆಯಲ್ಲಿ ನಮ್ಮ ಸಾವಿರಾರು ಸಂಖ್ಯೆಯ ಪುಸ್ತಕಗಳನ್ನು ಉಚಿತವಾಗಿ ಹಂಚುವದನ್ನು ಇದಕ್ಕೆ ಸೇರಿಸಲ್ಪಟ್ಟಂತೆ ಮಾಡುತ್ತಿದ್ದೇವೆ.

ಇಂತಹ ಬೃಹತ್ತಾದ ಹಣದ ಒಳಗೊಳ್ಳುವಿಕೆಯನ್ನು ಮಾಡಲು ಕರ್ತನು ತಾನೇ ನಡೆಸುತ್ತಿದ್ದಾನೆ. ಒಂದು ಬಾರಿಯ ಆರ್ಥಿಕ ಸಹಾಯ ಅಥವಾ ಪ್ರತಿ ತಿಂಗಳ ಆರ್ಥಿಕ ಸಹಾಯದ ಮೂಲಕ ನೀವು ನಮ್ಮ ಜೊತೆ ಆರ್ಥಿಕ ಸಹಾಯದಲ್ಲಿ ಪಾಲುಗಾರರಾಗಲು ನಿಮ್ಮನ್ನು ಸ್ವಾಗತಿಸುತ್ತೇವೆ. ನಮ್ಮ ದೇಶದಾದ್ಯಂತ ಮಾಡುವ ಸೇವಾಕಾರ್ಯಗಳಿಗಾಗಿ ನೀವು ಕಳುಹಿಸುವಂತಹ ನಿಮ್ಮ ಮೊತ್ತವು ಬಹಳವಾಗಿ ಮೆಚ್ಚುಗೆಯುಳ್ಳದಾಗಿರುತ್ತದೆ.

ನಿಮ್ಮ ಆರ್ಥಿಕ ಸಹಾಯವನ್ನು ಚೆಕ್ ಮೂಲಕವಾಗಿ ಕಳುಹಿಸಬಹುದು/ ನಮ್ಮ ಕಛೇರಿಯ ವಿಳಾಸವಾದ "All Peoples Church" ಬೆಂಗಳೂರಿಗೆ ಬ್ಯಾಂಕ್ ಡ್ರಾಫ್ಟ್ ಗಳನ್ನು ಕೊಡಬಹುದು ಅಥವಾ ನಮ್ಮ ಬ್ಯಾಂಕಿನ ಖಾತೆಯ ವಿವರಗಳನ್ನು ಉಪಯೋಗಿಸಿ ನೇರವಾಗಿ ಬ್ಯಾಂಕ್ ಮೂಲಕ ನಿಮ್ಮ ಕಾಣಿಕೆಗಳನ್ನು ವರ್ಗಾಯಿಸಬಹುದು.

**Account Name:** All Peoples Church
**Account Number:** 50200068829058
**IFSC Code:** HDFC0004367
**Bank:** HDFC Bank, 7M/308 80 Ft Road, HRBR Layout, Kalyan Nagar, Bengaluru- 560043, Karnataka

***ದಯವಿಟ್ಟು ಗಮನಿಸಿ:*** *ಆಲ್ ಪೀಪಲ್ಸ್ ಸಭೆಯು ಭಾರತ ದೇಶದಲ್ಲಿ ಬ್ಯಾಂಕ್ ಖಾತೆ ಹೊಂದಿರುವವರಿಂದ ಮಾತ್ರ ಬ್ಯಾಂಕ್ ಕಾಣಿಕೆಗಳನ್ನು ಅಂಗೀಕರಿಸುತ್ತಿದ್ದೇವೆ. ನಿಮ್ಮ ಕಾಣಿಕೆಗಳನ್ನು ಕೊಡುವಾಗ, ಆಲ್ ಪೀಪಲ್ಸ್ ಸಭೆಯ ಯಾವ ಕ್ಷೇತ್ರದಲ್ಲಿ ನಿಮ್ಮ ಕಾಣಿಕೆಯು ಉಪಯೋಗಿಸಬೇಕೆಂಬುದಾಗಿ ನಿಮ್ಮ ಅಪೇಕ್ಷೆಯನ್ನು ತಿಳಿಯಪಡಿಸಬಹುದು. ಹೆಚ್ಚುವರಿ ವಿವರಗಳಿಗಾಗಿ ದಯವಿಟ್ಟು ಸಂಪರ್ಕಿಸಿರಿ* ***apcwo.org/give****.*

ಹಾಗೆಯೇ ನಿಮಗೆ ಸಾಧ್ಯವಾಗುವಾಗಲೆಲ್ಲಾ ದಯವಿಟ್ಟು ನಮಗಾಗಿ ಮತ್ತು ನಮ್ಮ ಸೇವೆಗಾಗಿ ಪ್ರಾರ್ಥಿಸಿರಿ!

**ಧನ್ಯವಾದಗಳು ಮತ್ತು ದೇವರು ನಿಮ್ಮನ್ನು ಆಶೀರ್ವದಿಸಲಿ!**

## DOWNLOAD THE FREE APP!

*Search for*
"All Peoples Church Bangalore"
in the App or Google play stores.

Available on the App Store

ANDROID APP ON Google play







***A daily 5-minute video devotional.***
***A daily Bible reading and prayer guide.***
***5-minute Sermon summary.***
***Toolkit with Scriptures on various topics to build faith and information to share the Gospel.***
***Resources with sermons, sermon notes, TV programs, books, music and more.***

*IF YOU LOVE IT, TELL OTHERS ABOUT IT!*

Bible College
& MINISTRY TRAINING CENTRE

# ಆಲ್ ಪೀಪಲ್ಸ್ ಚರ್ಚ್ ಬೈಬಲ್ ಕಾಲೇಜು
**apcbiblecollege.org**

ಆಲ್ ಪೀಪಲ್ಸ್ ಚರ್ಚ್ ಬೈಬಲ್ ಕಾಲೇಜು ಭಾರತದ ಬೆಂಗಳೂರಿನಲ್ಲಿದೆ. ದೇವರ ವಾಕ್ಯದ ಬೌದ್ಧಿಕವಾದ ಉತ್ತೇಜಿಸುವಿಕೆಯ ಅಧ್ಯಯನ ಮತ್ತು ಸಿದ್ಧಾಂತಗಳ ಉತ್ತಮವಾದ ದೈವಿಕ ಸಿದ್ಧಾಂತಗಳೊಡನೆ ಪವಿತ್ರಾತ್ಮನ ಅತ್ಯದ್ಭುತಕರವಾದ ಬಲದಲ್ಲಿ ಸೇವೆ ಮಾಡಲು ಸಜ್ಜುಗೊಳಿಸಲಾಗುವುದು ಮತ್ತು ಆತ್ಮನಿಂದ ತುಂಬಿದ ಅಭಿಷೇಕ ಹೊಂದಿದ್ದು–ತರಬೇತಿಯನ್ನು ಪಡೆದುಕ್ಕೊಳ್ಳುವದನ್ನು ಒದಗಿಸುತ್ತವೆ. ಒಬ್ಬ ವ್ಯಕ್ತಿಯನ್ನು ದೈವಿಕ ಗುಣನಡತೆಗೆ ಒತ್ತು ನೀಡುವಂತಹ ಸೇವೆಗಾಗಿ, ದೇವರ ವಾಕ್ಯದಲ್ಲಿ ಆಳವಾಗಿ ಬೇರೂರುವುದಕ್ಕಾಗಿ, ಮತ್ತು ಕರ್ತನೊಂದಿಗಿನ ನಿಕಟವಾದ ಸಂಭಂದದಲ್ಲಿ ಹೊರ ಹರಿಯುವಂತಹ ಅದ್ಭುತಗಳು, ಸೂಚಕ ಕಾರ್ಯಗಳು ಮತ್ತು ಮಹತ್ಕಾರ್ಯಗಳನ್ನು ಬಲಯುತವಾಗಿ ಪ್ರದರ್ಶಿಸಲು ಅವರನ್ನು ಅಭಿವೃದ್ಧಿಪಡಿವುದನ್ನು ನಾವು ನಂಬುತ್ತೇವೆ.

ಆಲ್ ಪೀಪಲ್ಸ್ ಚರ್ಚ್ ಬೈಬಲ್ ಕಾಲೇಜು (ಏಪಿಸಿ-ಬಿಸಿ)ಯಲ್ಲಿ ಉತ್ತಮವಾದ ಬೋಧನೆಗಳ ಜೊತೆಗೆ ದೇವರ ಪ್ರೀತಿಯನ್ನು ಪ್ರದರ್ಶಿಸುವುದು, ಅಭಿಷೇಕ ಮತ್ತು ಪವಿತ್ರಾತ್ಮನ ಪ್ರಸನ್ನತೆ ಮತ್ತು ದೇವರ ವಾಕ್ಯದ ಅತ್ಯದ್ಭುತಕರ ಕಾರ್ಯಗಳಿಗೆ ನಾವು ಒತ್ತು ಕೊಡುತ್ತೇವೆ. ಅನೇಕ ಯುವ ಪುರುಷ ಮತ್ತು ಸ್ತ್ರೀಯರು ತರಬೇತಿ ಹೊಂದಿದ್ದಾರೆ ಮತ್ತು ಅವರ ಜೀವಿತಗಳ ಮೇಲೆ ದೇವರ ಕರೆಯನ್ನು ನೆರವೇರಿಸಲು ಕಳುಹಿಸಲ್ಪಟ್ಟಿದ್ದಾರೆ.

ನಾವು ಮೂರು ಕಾರ್ಯಕ್ರಮಗಳನ್ನು ನೀಡುತ್ತೇವೆ.


- ಒಂದು ವರ್ಷದ ಸರ್ಟಿಫಿಕೇಟ್ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ (C.Th.)
- ಎರಡು ವರ್ಷದ ಡಿಪ್ಲಮೋ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ (Dip.Th.)
- ಮೂರು ವರ್ಷದ ಬ್ಯಾಚೆಲೊರ್ಸ್ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ (B.Th.)

ತರಗತಿಗಳು ವಾರದ ಪ್ರತೀದಿನ **ಸೋಮವಾರದಿಂದ ಶುಕ್ರವಾರದವರೆಗೆ ಬೆಳ್ಳಿಗ್ಗೆ 9 ರಿಂದ ಮಧ್ಯಾಹ್ನ 12 ರವರೆಗೆ ಜರಗುತ್ತದೆ. ಭಾರತದ ಕಾಲಮಾನ (ಸಂಘಟಿತ ಸಾರ್ವಾತ್ರಿಕ ಸಮಯ+5:30).** ನಾವು ಇತರೆ ಮೂರು ಕಲಿಕಾ ಐಚ್ಚಿಕ ವಿಷಯಗಳನ್ನು ನೀಡುತ್ತೇವೆ.

- **ಆನ್–ಕ್ಯಾಂಪಸ್:** ಅಧ್ಯಯನ ಆವರಣದಲ್ಲಿ ವಯಕ್ತಿಕ ತರಗತಿಗಳಿಗೆ ಹಾಜರಾಗುವುದು.
- **ಅನ್ ಲೈನ್:** ಅನ್ ಲೈನ್ ನ ನೇರ ಉಪನ್ಯಾಸಗಳಿಗೆ ಹಾಜರಾಗುವದು.
- **ಇ–ಕಲಿಕೆ:** ಅನ್ ಲೈನ್ ಪೋರ್ಟರ್ ಆದ **apcbiblecollege.org/elearn** ನ ಮೂಲಕ ಸ್ವಯಂ ಚಾಲಿತವಾಗಿ ಕಲಿಯುವದು.

**ಅನ್ ಲೈನ್** ನಲ್ಲಿ ಅರ್ಜಿ ಸಲ್ಲಿಸಲು ಮತ್ತು ಕಾಲೇಜು ಪಠ್ಯಕ್ರಮ, ಅರ್ಹತಾ ಮಾನದಂಡ, ಬೋಧನಾ ವೆಚ್ಚಗಳ ಕುರಿತು ಹೆಚ್ಚಿನ ಮಾಹಿತಿಗಾಗಿ ಮತ್ತು ಅರ್ಜಿ ನಮೂನೆಯನ್ನು ಡೌನ್ಲೋಡ್ ಮಾಡಲು ದಯವಿಟ್ಟು **apcbiblecollege.org** ಯನ್ನು ಸಂಪರ್ಕಿಸಿ.

ನಾವೆಲ್ಲರೂ ಮದುವೆಯು ದೇವರ ಯೋಜನೆಯಾಗಿದೆ ಎಂದು ನಂಬುತ್ತೇವೆ,
ಆದದರಿಂದ ಮದುವೆಯನ್ನು ನಾವು ಆನಂದಿಸುತ್ತೇವೆ.
ಸಭೆಯು ದೇವರ ಯೋಜನೆಯಾಗಿದೆ ಎಂದು ನಾವು ನಂಬುತ್ತೇವೆ,
ಆದದರಿಂದ ನಾವು ಸಭೆಯನ್ನು ಆನಂದಿಸುತ್ತೇವೆ.
ಶುಭ ಸಮಾಚಾರವೆಂದರೆ ಕೆಲಸವು ಸಹ ದೇವರ ಯೋಜನೆಯಾಗಿದೆ,
ದೇವರು ಅದನ್ನು ಸ್ಥಾಪಿಸಿದ್ದಾನೆ! ಆದದರಿಂದ, ಕೆಲಸವನ್ನು ಆನಂದಿಸಿರಿ.




**All Peoples Church & World Outreach**
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

Phone: +91-80-25452617
Email: contact@apcwo.org
Website: apcwo.org